ಡಿಸೆಂಬರ್ ೨೦೨೫


## ಆರ್ಬಿಟ್,ಹುಮನಾಬಾದ

ಸಮಾಜ ಸೇವಾ ಸಂಸ್ಥೆ, ಎನ್.ಎಚ್. ೬೫ ರೈಲ್ವೇ ನಿಲ್ದಾಣದ ಹತ್ತಿರ ಹುಮ್ನಾಬಾದ ತಾಲೂಕು, ಬೀದರ್ ಜಿಲ್ಲೆ, ಕರ್ನಾಟಕ, 585330

## ಸೇವಾ ಸಂಗಮ ಸಂಸ್ಥೆ, ಕಲಬುರಗಿ

ಸಮಾಜ ಸೇವಾ ಸಂಸ್ಥೆ ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ
ಕೇಂದ್ರೀಯ ವಿದ್ಯಾಲಯ ಹತ್ತಿರ, ಕೋಟ್ನೂರ (ಡಿ) ಜೇವರ್ಗಿ ರಸ್ತೆ ಕಲಬುರಗಿ


# ಸೇವಾವಾಣಿ

## ಸಮಾಜದ ಹಿತಕ್ಕೆ ಸಮರ್ಪಿತ ಸೇವೆ



### “ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳಿಗಾಗಿ ಸಾಧನ ಸಲಕರಣೆ ವಿತರಣಾ ಕಾರ್ಯಕ್ರಮ”

14 ನವೆಂಬರ್ 2025ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳಿಗಾಗಿ ಸಾಧನ ಸಲಕರಣೆ ವಿತರಣಾ ಕಾರ್ಯಕ್ರಮ ಮತ್ತು ಮಕ್ಕಳ ದಿನಾಚರಣೆಯನ್ನು ಹಮ್ಮಿಕೊಳ್ಳಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಗುಲ್ಬರ್ಗ ಧರ್ಮಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾದರ್ ಸಂತೋಷ ಬಾಪು ಅವರು ವಿಶೇಷ ಚೇತನ ಮಕ್ಕಳಿಗೋಸ್ಕರ ಸೇವಾ ಸಂಗಮ ಸಂಸ್ಥೆಯು ಹಲವಾರು ವರ್ಷಗಳಿಂದ ಸೇವೆ ಮಾಡುತ್ತಾ ಬಂದಿದೆ ವಿಶೇಷ ಚೇತನರ ಜೀವನದಲ್ಲಿ ಹೊಸ ಬೆಳಕು ಮೂಡಿಸಲಾಗಿದೆ. ಸಾಮಾನ್ಯ ಮಕ್ಕಳಂತೆ ನ್ಯೂನತೆ ಇರುವ ಮಕ್ಕಳಿಗೆ ಸಹಪಾಲಕರು ಉತ್ತಮರೀತಿಯಲ್ಲಿ ಪಾಲನೆ ಪೋಷಣೆ ಮಾಡಬೇಕು. ಅವರಿಗೂ ಸಹ ಸಮಾಜದಲ್ಲಿ ಸಮಾನತೆಯಿಂದ ಬದುಕಲು ಉತ್ತಮವಾದ ಪರಿಸರ ಒದಗಿಸಬೇಕೆಂದು ಪಾಲಕರಿಗೆ ಮಾಹಿತಿ ನೀಡಿದರು. ಜಿಲ್ಲಾ ಹಿರಿಯ ನಾಗರಿಕರ ಮತ್ತು ಅಂಗವಿಕಲರ ಕಲ್ಯಾಣ ಅಧಿಕಾರಿಗಳಾದ ಸಾಧಿಕ ಹುಸೇನ್ ವಿಶೇಷ ಚೇತನರಿಗೆ ಸರಕಾರದಿಂದ ಹಲವಾರು ಸೌಲಭ್ಯಗಳಿವೆ ಅವುಗಳನ್ನು ಪಡೆಯಿರಿ. ಯಾವುದೇ ಅಡೆತಡೆ ಸಮಸ್ಯೆಗಳಿದ್ದರೆ ನಮಗೆ ಮಾಹಿತಿ ನೀಡಿ ಸೇವಾ ಸಂಗಮ ಸಂಸ್ಥೆಯು ವಿಶೇಷ ಚೇತನರ ಮಕ್ಕಳಿಗಾಗಿ ಹಲವಾರು ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಇದು ನಮ್ಮೆಲ್ಲರ ಹೆಮ್ಮೆಯ ವಿಷಯವಾಗಿದೆ ಎಂದು ಮಾಹಿತಿ ನೀಡಿದರು. ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಮಕ್ಕಳಿಗೆ ಪಾಲಕರು ದಿನನಿತ್ಯ ಉತ್ತೇಜನ ಚಟುವಟಿಕೆ ಮಾಡುವುದರ ಮುಖಾಂತರ ಮಕ್ಕಳಲ್ಲಿ ಬದಲಾವಣೆಯನ್ನು ಕಾಣಬಹುದಾಗಿದೆ ಮಕ್ಕಳ ಬೆಳವಣಿಗೆಯಲ್ಲಿ ಪಾಲಕರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು. ಶೀಘ್ರ ಪತ್ತೆಹಚ್ಚಿವಿಕೆ ಮತ್ತು ಆರಂಭಿ ಕಶಿಕ್ಷಣ ಯೋಜನೆಯ ವ್ಯವಸ್ಥಾಪಕರಾದ ಶ್ವೇತ ಅವರು ಪ್ರಾಸ್ತವಿಕ ನುಡಿಯನ್ನು ಹೇಳಿದರು. ನಂತರ ಮಕ್ಕಳಿಗೆ ಸಾಧನ ಸಲಕರಣೆಗಳನ್ನು ವಿತರಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಫಾದರ್ ಪ್ರವೀಣ ಪ್ರೇಷ್ಟ ಮುಖ್ಯ ಗುರುಗಳು, ಸೇಂಟ್ ಮೇರಿ ಆರ್ಪಿಡಿಟಾಸ್ಕಿನ ಉಪಾಧ್ಯಕ್ಷರಾದ ಗಾಯತ್ರಿ ಮೆಡಂ ಹಾಗೂ ಮಕ್ಕಳ ಪಾಲಕರ ಸಂಘದ ಅಧ್ಯಕ್ಷರಾದ ರೇಣುಕಾ ಹಾಗೂ ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಗೂ 80 ಜನ ಮಕ್ಕಳ ಪಾಲಕರು ಉಪಸ್ಥಿತರಿದ್ದರು.



ಡಾ॥ ರಾಬರ್ಟ್ ಮೈಕಲ್ ಮಿರಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ







ಮಾನವೀಯತೆಯ ಸೇವೆ,
ಉತ್ತಮ ನಾಳೆಯ ನಿರ್ಮಾಣ.

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಆಪ್ತಸಮಾಲೋಚನೆ ಕಾರ್ಯಗಾರ”



27 ನವೆಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ಕಲ್ಲೂರು ಗ್ರಾಮದಲ್ಲಿ ನವಜೀವನ ಎ.ಪಿ.ಎಫ್ ಯೋಜನೆಯ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಸಮುದಾಯ ಆಧಾರಿತ ಆಪ್ತ ಸಮಾಲೋಚನೆಯು ಕ್ಷೇತ್ರ ಆಧಾರಿತವಾಗಿದು. ಈ ಫಲಾನುಭವಿಗಳಿಗೆ ಆಪ್ತ ಸಮಾಲೋಚನೆಯಲ್ಲಿ ಒಳಪಡಿಸಲಾಗಿತ್ತು. ಇವರ ಕೌಟುಂಬಿಕದಲ್ಲಿ ಆರ್ಥಿಕ ಪರಿಸ್ಥಿತಿಯು ಕುಗ್ಗಿರುವುದ್ದಾಗಿ ಕಂಡು ಬರುತ್ತದೆ. ಇವರು ಜೀವನದಲ್ಲಿ ಬಹಳ ನೊಂದು ಕೊಂಡಿರುತ್ತಾರೆ. ಇವರ ಸಮಸ್ಯೆಗಳಿಗೆ ಪರಿಹಾರ ಸಿಗುವುದರಲ್ಲಿ ಕಡಿಮೆಯಾಗಿ ಕಾಣುತ್ತವೆ ಅವರು ನೊಂದ ಮನಸ್ಸಿನಲ್ಲಿ ನೋವನ್ನು ವ್ಯಕ್ತಪಡಿಸಿರುತ್ತಾರೆ. ನನಗೆ ಸದ್ಯದಲ್ಲಿ ಉತ್ತಮ ಆರೋಗ್ಯ ಮತ್ತು ಜೀವನದ ಮೌಲ್ಯಗಳನ್ನು ಅನುಸರಿಸಲು ಸಹಾಯವಾಗುತ್ತಿದೆ. ಆರ್ಬಿಟ್ ಸಂಸ್ಥೆ ವತಿಯಿಂದ ಸ್ವಯಂ ಉದ್ಯೋಗಕ್ಕಾಗಿ ಅರ್ಜಿ ನೀಡಿರುತ್ತೆನೆ. ಇದರ ಫಲವಾಗಿ ನನ್ನಗೆ ಸಂಸ್ಥೆಯಿಂದ ಎರಡು ಕುರಿಗಳನ್ನು ನೀಡಿರುತ್ತಾರೆ. ಮನೆಯಿಂದ ಹೊರಗಡೆ ಹೋಗದೇ ಇರುವುದು ಒಂದು ದುಃಖ ಸಂಗತಿಯಾಗಿತ್ತು. ಸದ್ಯದಲ್ಲಿ ಕುರಿಗಳನ್ನು ಕಾಯುತ್ತಾ ಮತ್ತು ಹೊಲಗದ್ದೆಯಲ್ಲಿ ಸಣ್ಣಪುಟ್ಟ ಕೆಲಸಗಳನ್ನು ಮಾಡಲು ಬಹಳ ಸಂತೋಷವಾಗುತ್ತಿದೆ. ಮತ್ತು ಆಪ್ತ ಸಮಾಲೋಚನೆಯಲ್ಲಿ ಕಷ್ಟ, ದುಃಖ, ನೋವುಗಳಿಂದ ಹೊರಬರಲು ಸಾಧ್ಯವಾಗಿತ್ತು. ಮತ್ತು ಫಲಾನುಭವಿಗಳು ತನ್ನ ಆತ್ಮವಿಶ್ವಾಸ, ಧೈರ್ಯವನ್ನು ಪಡೆದುಕೊಳ್ಳುವಲ್ಲಿ ಮುಂದಾಗಿದ್ದೇವೆ. ಮನೋವೈದ್ಯರನ್ನು ಭೇಟಿ ಮಾಡಿದಾಗ ಅನೇಕ ಸಲಹೆಗಳು ಸೂಚನೆಗಳು ಮಾರ್ಗದರ್ಶನ ಪಡೆಯುವುದರಿಂದ ಬಹಳ ಉಪಯೋಗಕಾರಿಯಾಗುತ್ತಿದೆ. ನಾನು ಸದ್ಯ ಮಾತ್ರೆಗಳು ನಿಲ್ಲಿಸಿದೇನೆ. ವರ್ತನೆಗಳು ಕಡಿಮೆ ಆಗಿವೆ. ಸುಮಾರು 80% ರಷ್ಟು ಅಸ್ಸಮೆಂಟ್ ಮೂಲಕ ಗುಣಹೊಂದಿರುತ್ತಾರೆ. ನೀವು ಮಾಡುವ ಸೇವೆ ಮತ್ತು ಸಹಾಯದಿಂದ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಮತ್ತು ಆರ್ಬಿಟ್ ಸಂಸ್ಥೆಯ ನಿರ್ದೇಶಕರಿಗೆ ಮತ್ತು ಶ್ರೀ ರವಿಕುಮಾರ್ ಆಪ್ತ ಸಮಾಲೋಚಕರಿಗೆ ನನ್ನ ಹೃದಯ ಅಂತರಾಳದಿಂದ ಧನ್ಯವಾದಗಳು ಸಲ್ಲಿಸಿರುತ್ತಾರೆ.

## “ಗುಲಾಬಿ ವಿಶೇಷ ವಿಕಲಚೇತನರ ಸಂಘದ ಸಭೆ”



10 ನವೆಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ಶಕ್ಕರ್‌ಗಂಜ್ ಗ್ರಾಮಕ್ಕೆ ಭೇಟಿ ನೀಡಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಹುಸೇನ್‌ಸಾಬ್ ಜಾನಿಮಿಯಾ ಅವರ ಮನೆ ಅಂಗಳದಲ್ಲಿ ಗುಲಾಬಿ ವಿಶೇಷ ವಿಕಲಚೇತನರ ಸಂಘದ ಸಭೆ ಸೇರಲಾಯಿತು. ಸೇರಿಬಂದ ಸಂಘದ ಸದ್ಯಸರಿಗೆ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಡೇವಿಡ್ ಅವರು ಕಾರ್ಯಕ್ರಮ ಹಸ್ತಾಂತರದ ಕುರಿತು ಮಾಹಿತಿಯನ್ನು ನೀಡಿದರು. ಮುಂಬರುವ ದಿನಗಳಲ್ಲಿ ಸಂಘದ ಸದಸ್ಯರು ಮತ್ತು ನಾಯಕರು ತಮ್ಮ ಜವಾಬ್ದಾರಿಗಳನ್ನು ಅರಿತು ಕಾರ್ಯವನ್ನು ನಿರ್ವಹಿಸಬೇಕಾಗಿದೆ. ಈಗಾಗಲೇ ತಮಗೆ ತಿಳಿಸಿರುವ ಮಾಹಿತಿಗಳು ನೀಡಿರುವ ಮಾರ್ಗದರ್ಶನಗಳನ್ನು ಅಳವಡಿಸಿಕೊಂಡು ತಮ್ಮ ಫಲಾನುಭವಿಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ನೋಡಿಕೊಳ್ಳಬೇಕು. ತಾಲೂಕುಗಳಲ್ಲಿ ನಡೆಯುತ್ತಿರುವ ಡಿ.ಎಂ.ಎಚ್.ಪಿ ಶಿಬಿರದ ಸ್ಥಳಗಳು ಮತ್ತು ದಿನಾಂಕಗಳನ್ನು ಖಚಿತಪಡಿಸಿಕೊಂಡು ತಮ್ಮ ಫಲಾನುಭವಿಗಳನ್ನು ಕರೆದುಕೊಂಡು ಹೋಗಿ ಚಿಕಿತ್ಸೆ ನೀಡುವುದು ಜೊತೆಗೆ ಯುಡಿಐಡಿ ಕಾರ್ಡ್ ಮತ್ತು ಮಾಸ ಶಾಸನದ ಅರ್ಜಿ ಸಲ್ಲಿಸುವುದು ಅಧಿಕಾರಿಗಳನ್ನು ಭೇಟಿ ಮಾಡುವುದು. ಈ ಸಭೆಯ ಮುಖ್ಯ ಜವಾಬ್ದಾರಿಗಳಾಗಿವೆ. ಇವುಗಳನ್ನು ಪಾಲಿಸಿ ತಮ್ಮ ಫಲಾನುಭವಿಗಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡುವುದು ನಾಯಕರ ಪ್ರಮುಖ ಕರ್ತವ್ಯವಾಗಿದೆ ಎಂದು ಸಂಘದ ಸದಸ್ಯರಿಗೆ ಮಾಹಿತಿಯನ್ನು ತಿಳಿಸಿಕೊಡಲಾಯಿತು.

## “ಅಂಬೇಡ್ಕರ್ ವಿಶೇಷ ಚೇತನರ ಸಂಘದ ಸಭೆ”



ಹುಮ್ನಾಬಾದ್ ಪಟ್ಟಣದ ಎಂಪಿ ಗಲ್ಲಿಯಲ್ಲಿರುವ ಅಂಬೇಡ್ಕರ್ ವಿಶೇಷ ಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ ಶ್ರೀ ನೀಲಕಂಠ ಅವರು ಸಂಘದ ಜವಾಬ್ದಾರಿ ಹಾಗೂ ಹಕ್ಕುಗಳ ಕುರಿತು ವಿವರಿಸಿದರು. ಸಂಘದ ಸದಸ್ಯರು ಉಳಿತಾಯ ಮಾಡುವ ಮೂಲಕ ಸ್ವಸಹಾಯ ಮಾಡಿಕೊಳ್ಳಬಹುದು. ಆಪತ್ತಿನಲ್ಲಿ ತುರ್ತಾಗಿ ಹಣದ ಅವಶ್ಯಕತೆ ಇದ್ದಲ್ಲಿ ಸಂಘದಿಂದ ಪಡೆದುಕೊಂಡು ಉಪಯೋಗಿಸಬಹುದು ಎಂದು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರಾದ ಶ್ರೀ ಅರುಣ್‌ಕುಮಾರ್ ಕೋಟೆ ಅವರು ಉಪಸ್ಥಿತರಿದ್ದರು.

## "ಕ್ಯಾನ್ಸರ್ ಮಹಾಮಾರಿ ಕುರಿತು ಜಾಗೃತಿ ಕಾರ್ಯಕ್ರಮ"



11 ನವೆಂಬರ್ 2025ರಂದು ಹುಮನಾಬಾದ್ ತಾಲೂಕಿನ ಜಲಸಂಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಸಮುದಾಯದ 35 ಜನರಿಗೆ ಕ್ಯಾನ್ಸರ್ ಮಹಾಮಾರಿ ಕುರಿತು ಜಾಗೃತಿ ಕಾರ್ಯಕ್ರಮವನು ಭವಾನಿ ಮಂದಿರದಲಿ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಕಾರ್ಯಕರ್ತ ಶ್ರೀಮತಿ ಮಹಾದೇವಿ ಈ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ಬಗ್ಗೆ ಕುರಿತು ಮಾಹಿತಿ ನೀಡಲಾಯಿತು. ಕ್ಯಾನ್ಸರ್ ಕಾಯಿಲೆ ಲಕ್ಷಣಗಳು ಸ್ತನ ಕ್ಯಾನ್ಸರ್ ಗರ್ಭಕೋಶ ಗಂಟಲು ಬಾಯಲ್ಲಿ ಒಂದು ಸಣ್ಣ ಸಣ್ಣ ಗಂಟುಗಳ ಮೂಲಕ ಕಂಡುಬರುತ್ತದೆ. ಅದನ್ನು ವೈದ್ಯರಿಂದ ತಪಾಸಣೆ ಪಡೆದುಕೊಳ್ಳಬೇಕು. ಸ್ವಲ್ಪ ಇದ್ದಾಗಲೇ ಅದಕ್ಕೆ ಕ್ಯಾನ್ಸರ್ ಬರೆದ ಹಾಗೆ ನಿಮ್ಮ ಆರೋಗ್ಯ ನೋಡಿಕೊಳ್ಳಿರಿ. ತಂಬಾಕು ಸರಾಯಿ ಸೇವನೆಯಿಂದ ದೂರವಿರಿ ಎಂದು ಮಾಹಿತಿ ನೀಡಲಾಯಿತು.

## "ತಾವರೆ ವಿಶೇಷ ಚೇತನರ ಸಂಘದ ಸಭೆ"



25 ನವೆಂಬರ್2025 ರಂದು ಚಿಡುಗುಪ್ಪ ತಾಲೂಕಿನ ತಾಳಮಡಗಿ ಗ್ರಾಮಕ್ಕೆ ಭೇಟಿ ನೀಡಿ ಆರ್ಬಿಟ್ ಸಂಸ್ಥೆ ಹುಮನಾಬಾದ್ ಮತ್ತು ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ತಾವರೆ ವಿಶೇಷ ಚೇತನರ ಸಂಘದ ಸಭೆ ಸೇರಲಾಯಿತು. ಸೇರಿಬಂದ ಸಂಘದ ಸದಸ್ಯರಿಗೆ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣ್‌ಕುಮಾರ್ ಅವರು ಕಾರ್ಯಕ್ರಮ ಹಸ್ತಾಂತರದ ಕುರಿತು ಮಾಹಿತಿ ನೀಡಿದರು. ಮುಂಬರುವ ದಿನಗಳಲ್ಲಿ ಸಂಘದ ಸದಸ್ಯರು ಮತ್ತು ನಾಯಕರು ತಮ್ಮ ಜವಾಬ್ದಾರಿಯನ್ನು ಅರಿತು ಕಾರ್ಯನಿರ್ವಹಿಸಬೇಕಾಗಿದೆ. ಈಗಾಗಲೇ ತಮಗೆ ತಿಳಿಸಿರುವ ಮಾಹಿತಿಗಳು ಮತ್ತು ನೀಡಿರುವ ಮಾರ್ಗದರ್ಶನಗಳನ್ನು ಅಳವಡಿಸಿಕೊಂಡು ತಮ್ಮ ಫಲಾನುಭವಿಗಳಿಗೆ ಯಾವುದೇ ರೀತಿಯ ತೊಂದರೆಗಳು ಆಗದಂತೆ ನೋಡಿಕೊಳ್ಳಬೇಕು. ಮತ್ತು ಡಿ.ಎಮ್.ಎಚ್.ಪಿ ಕ್ಯಾಂಪ್‌ಗಳಿಗೆ ಸರಿಯಾಗಿ ಹೋಗುವಂತೆ ಮತ್ತು ಉಚಿತ ಚಿಕಿತ್ಸೆ ಲಭಿಸುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಲಾಯಿತು. ಈ ಸಭೆಯಲಿ 05 ಜನ ಸದಸ್ಯರು ಭಾಗವಹಿಸಿದ್ದರು.

## "ಜೈ ಶ್ರೀ ರಾಮ ವಿಶೇಷ ವಿಕಲ ಚೇತನರ ಸಂಘದ ಸಭೆ"



07 ನವೆಂಬರ್ 2025ರಂದು ಹುಮನಾಬಾದ್ ತಾಲೂಕಿನ ಕುಮಾರ ಚಿಂಚೋಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮ್‌ಜೀ ಫೌಂಡೇಶನ್ ಇವರ ಸಂಯುಕ್ತಶ್ರದಲ್ಲಿ ಜೈ ಶ್ರೀ ರಾಮ ವಿಶೇಷ ವಿಕಲ ಚೇತನರ ಸಂಘದ ಸಭೆಯು ಯಶಸ್ವಿಯಾಗಿ ನೆರವೇರಿತು. ಈ ಸಭೆಗೆ ಸಂಪನ್ಮೂಲ ವ್ಯಕ್ತಿಯಾಗಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಪ್ರವೀಣ್ ಹಾಗೂ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಸಭೆಯ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು. ಅಂಗವಿಕಲ ಸೌಲಭ್ಯ ಆರೋಗ್ಯ ಸೇವೆಗಳು ಶಿಕ್ಷಣ ಸಾರಿಗೆ ಸೌಲಭ್ಯಗಳ ಬಗ್ಗೆ ಸದಸ್ಯರು ತಮ್ಮ ಅಗತ್ಯಗಳನ್ನು ತಿಳಿಸಿದರು. ಸರ್ಕಾರ ನೀಡುತ್ತಿರುವ ವಿವಿಧ ಯೋಜನೆಗಳ ಮಾಹಿತಿ ವಿತರಣೆ, ಯುಡಿಐಡಿ ಕಾರ್ಡ್ ಡಿಸೆಬಿಲಿಟಿ ಪೆನ್ಷನ್ ಸಹಾಯಕ ಉಪಕರಣಗಳ ವಿತರಣೆ ಚಿಕಿತ್ಸೆ ಮತ್ತು ಪುನರ್ವಸತಿ ಸಂಬಂಧಿಸಿದ ಮಾಹಿತಿಯನ್ನು ಸದಸ್ಯರಿಗೆ ನೀಡಲಾಯಿತು. ಪೋಷಕರಿಗೆ ಮಾರ್ಗದರ್ಶನ ಮಕ್ಕಳ ಆರೈಕೆ ವಿದ್ಯಾಭ್ಯಾಸ ಥೆರಪಿ ಮತ್ತು ದಿನನಿತ್ಯದ ಸಹಾಯಗಾರಿಕೆ ಬಗ್ಗೆ ಸಲಹೆ ನೀಡಲಾಯಿತು. ಒಟ್ಟು 09 ಜನ ಫಲಾನುಭವಿಗಳು ಮತ್ತು ಪೋಷಕರು ಭಾಗವಹಿಸಿದರು.

# "ನವಜೀವನ (ಎಲ್.ಎಲ್. ಎಲ್. ಎಫ್) ಕಾರ್ಯಕ್ರಮ"

## "ಗ್ರಾಮ ಪಂಚಾಯತ್‌ನಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ಶ್ರೀ ಅರುಣ್ ರವರು ಬೀದರ್ ಜಿಲ್ಲೆಯ ನಗೋರ ಗ್ರಾಮದ ಗ್ರಾಮ ಪಂಚಾಯತ್‌ನಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಇದರಲ್ಲಿ ನಮ್ಮ ಸಂಸ್ಥೆ ಮಾನಸಿಕ ಅಸ್ವಸ್ಥರ ಪುನರ್ವಸತಿ ಹಾಗೂ ಪುನರ್ ಚೇತನ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡಿರುವ ಹಾಗೂ ನೀಡುತ್ತಿರುವ ಸೇವೆಯ ಕುರಿತು ಮಾಹಿತಿ ನೀಡಲಾಯಿತು. ಇದರಲ್ಲಿ ಪತ್ತೆ ಹಚ್ಚಲಾದ ವ್ಯಕ್ತಿಗಳನ್ನು ಚಿಕಿತ್ಸೆಗೆ ಒಳಪಡಿಸುವ ರೀತಿ ಹಾಗೂ ಸರ್ಕಾರದಿಂದ ಅವರಿಗೆ ಲಭಿಸುವ ಸೌಲಭ್ಯಗಳ ಮಾಹಿತಿ ನೀಡಲಾಯಿತು.

## “ಮಾನಸಿಕ ಅಸ್ವಸ್ಥರ ಬನಶಂಕರಿ ಆರೈಕೆದಾರರ ಸಭೆ”



05 ನವೆಂಬರ್ 2025ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್, ಲವ್, ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಮಹಾದೇವ ರವರು ಮಾನಸಿಕ ಅಸ್ವಸ್ಥರ ಬನಶಂಕರಿ ಆರೈಕೆದಾರರ ಸಭೆಯನ್ನು ಹಮ್ಮಿಕೊಂಡರು. ಸಭೆಗೆ ಬಂದ ಎಲ್ಲಾ ಆರೈಕೆದಾರರ ಆರೋಗ್ಯ ಕ್ಷೇಮವನ್ನು ವಿಚಾರಿಸಲಾಯಿತು, ಆರೈಕೆದಾರರ ಸಭೆಯ ಮುಖ್ಯ ಉದ್ದೇಶ, ಎಲ್ಲರೂ ಒಗ್ಗಟ್ಟಿನಿಂದ ಕೂಡುವುದು, ಪರಸ್ಪರ ಬೆಂಬಲ ನೀಡುವುದು, ಅನುಭವಗಳನ್ನು ಹಂಚಿಕೊಳ್ಳುವುದು, ಮಾನಸಿಕ ಅಸ್ವಸ್ಥರ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಎಂಬ ಹಲವು ವಿಷಯಗಳನ್ನು ಚರ್ಚಿಸುವುದೇ ಆಗಿದೆ ಎಂದು ತಿಳಿಸಲಾಯಿತು.ಈ ಸಭೆಯಲ್ಲಿ ಆರೋಗ್ಯ ಸುಧಾರಣೆಯ ಚರ್ಚೆ, ಇತ್ತೀಚಿನ ಸವಾಲುಗಳು ಮತ್ತು ಯಶಸ್ಸುಗಳು, ಸ್ವ ಆರೋಗ್ಯದ ಪ್ರಾಮುಖ್ಯತೆ,ಒತ್ತಡ ನಿರ್ವಹಣೆ, ಸರ್ಕಾರದ ಯೋಜನೆಗಳು ಮತ್ತು ಇತರೆ ಯೋಜನೆಗಳ ಮಾಹಿತಿ, ದೈನಂದಿನ ಚಟುವಟಿಕೆಗಳುಹೀಗೆ ಮುಂತಾದ ವಿಷಯಗಳ ಕುರಿತು ಆರೈಕೆದಾರರಿಗೆ ಮಾಹಿತಿಯನ್ನು ನೀಡಲಾಯಿತು.ಈ ಆರೈಕೆದಾರರ ಸಭೆಯಲ್ಲಿ 10 ಆರೈಕೆದಾರರು ಭಾಗವಹಿಸಿದರು.

## “ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ”



03 ನವೆಂಬರ್ 2025ರಂದು ಭಾಲ್ಕಿ ತಾಲೂಕಿನ ಹಲ್ಬರ್ಗಾ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆಯ ಲಿವ್. ಲವ್. ಲಾಫ್ ಸಂಯುಕ್ತ ಆಶ್ರಯದಲ್ಲಿ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಜಾಗೃತಿ ಕಾರ್ಯಕ್ರಮವನ್ನು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಬಸವಜ್ಯೋತಿರವರು ನಡೆಸಿಕೊಡಲಾಯಿತು. ಇದರಲ್ಲಿ ಕ್ಯಾನ್ಸರ್ ಎಂದರೇನು? ಕ್ಯಾನ್ಸರ್ ವಿಧಗಳು, ರೋಗದ ಸೂಚನೆ, ಲಕ್ಷಣಗಳು, ಕ್ಯಾನ್ಸರ್ ಬಾರದಂತೆ ತಡೆಯುವ ವಿಧಾನ ಹಾಗೂ ಅನುಸರಿಸಬೇಕಾದ ಎಚ್ಚರಿಕೆಯ ವಿಧಾನಗಳ ಬಗ್ಗೆ ತಿಳಿಸಲಾಯಿತು. ಪೌಷ್ಠಿಕ ಆಹಾರವಾದ ಮೊಟ್ಟೆ, ಸೋಯಾಬೀನ್ಸ್, ಶುಂಠಿ ಈ ರೀತಿಯ ಆಹಾರದಿಂದ ಮತ್ತು ನಮ್ಮ ಸುತ್ತಮುತ್ತ ಸ್ವಚತೆಯನ್ನು ಕಾಪಾಡುವುದರಿಂದ ಕ್ಯಾನ್ಸರ್ ಎನ್ನುವ ಮಹಾಮಾರಿಯಿಂದ ದೂರವಿರಬಹುದು ಎಂದು ತಿಳಿಯಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಇತರರ ಆರೈಕೆಗೆ ಮೊದಲು ನಮ್ಮದೇ ಆರೋಗ್ಯ ಕಾಪಾಡುವುದು ಅತ್ಯವಶ್ಯಕ”



03 ನವೆಂಬರ್ 2025ರಂದು ತೆಲಗಾವ ಗ್ರಾಮ, ಭಾಲ್ಕಿ ತಾಲೂಕದಲ್ಲಿ, ಆರ್ಬಿಟ್ ಸಂಸ್ಥೆಯ ಹಾಗೂ ಲಿವ್,ಲವ್,ಲಾಫ್ ಸಹಯೋಗದಲ್ಲಿ ಕಾರ್ಯಕರ್ತರಾದ ಶ್ರೀ ಪೀಟರ್ ರವರಿಂದ ಆರೈಕೆದಾರರ ಸಭೆಯನ್ನು ಅರ್ಥಪೂರ್ಣವಾಗಿ ಮತ್ತು ಉತ್ಸಾಹಭರಿತವಾಗಿ ನೆರವೇರಿಸಲಾಯಿತು. ಸಭೆಯ ಆರಂಭದಲ್ಲಿ ಶ್ರೀ ಪೀಟರ್ ರವರು ಎಲ್ಲರಿಗೆ ಹೃತ್ಪೂರ್ವಕ ಸ್ವಾಗತ ಕೋರಿ ಸಭೆಯ ಉದ್ದೇಶವನ್ನು ವಿವರಿಸಿದರು. ಸಭೆಯ ಪ್ರಮುಖ ಅಂಶವಾಗಿ ಆರೋಗ್ಯ ಸುಧಾರಣೆ, ಸರಿಯಾದ ಆಹಾರ ಪದ್ಧತಿ, ದೈನಂದಿನ ವ್ಯಾಯಾಮ ಹಾಗೂ ವಿಶ್ರಾಂತಿಯ ಅಗತ್ಯತೆ ಕುರಿತು ಚರ್ಚೆ ನಡೆಸಲಾಯಿತು. ಭಾಗವಹಿಸಿದವರು ತಮ್ಮ ದಿನನಿತ್ಯದ ಜೀವನದಲ್ಲಿ ಅನುಸರಿಸಬಹುದಾದ ಸರಳ ಆದರೆ ಪರಿಣಾಮಕಾರಿ ವಿಧಾನಗಳನ್ನು ಹಂಚಿಕೊಂಡರು. ಸ್ವ ಆರೋಗ್ಯದ ಮಹತ್ವದ ಕುರಿತಾಗಿ ಜಾಗೃತಿ ಮೂಡಿಸಲಾಯಿತು. “ಇತರರ ಆರೈಕೆಗೆ ಮೊದಲು ನಮ್ಮದೇ ಆರೋಗ್ಯ ಕಾಪಾಡುವುದು ಅತ್ಯವಶ್ಯಕ” ಎಂಬ ಸಂದೇಶವನ್ನು ಶ್ರೀ ಪೀಟರ್ ರವರು ಸ್ಪಷ್ಟವಾಗಿ ತಿಳಿಸಿದರು. ಸಭೆಯಲ್ಲಿ ಸರ್ಕಾರದಿಂದ ಲಭ್ಯವಿರುವ ಯೋಜನೆಗಳು ಮತ್ತು ನೆರವುಗಳ ಕುರಿತು ಮಾಹಿತಿ ನೀಡಲಾಯಿತು. ಇದರಿಂದ ಭಾಗವಹಿಸುವವರು ಸರ್ಕಾರದ ಸಹಾಯವನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವ ವಿಶ್ವಾಸವನ್ನು ವ್ಯಕ್ತಪಡಿಸಿದರು. ಕೊನೆಯ ಹಂತದಲ್ಲಿ ಮಾನಸಿಕ ಅಸ್ವಸ್ಥರೊಂದಿಗೆ ಸಂವಹನ ಮಾಡುವ ಶೈಲಿ, ಸಹಾನುಭೂತಿ, ಹಾಗೂ ಸಹನೆಯ ಮಹತ್ವದ ಬಗ್ಗೆ ಚರ್ಚೆ ನಡೆಸಲಾಯಿತು. ಸಭೆಯ ಅಂತ್ಯದಲ್ಲಿ ಭಾಗವಹಿಸಿದವರು ತಮ್ಮ ಅನುಭವಗಳನ್ನು ಹಂಚಿಕೊಂಡು, ಮುಂದಿನ ಸಭೆಗಳಲ್ಲಿ ಇನ್ನಷ್ಟು ಕಲಿಕೆ ಮತ್ತು ಹಂಚಿಕೊಳ್ಳುವ ಉತ್ಸಾಹದೊಂದಿಗೆ ಕಾರ್ಯಕ್ರಮವನ್ನು ಸಮಾಪಿಸಿದರು. ಸಭೆಯಲ್ಲಿ 7 ಸದಸ್ಯರು ಭಾಗವಹಿಸಿದರು.

## “ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ”



11 ನವೆಂಬರ್ 2025ರಂದು ಬಸವಕಲ್ಯಾಣ ತಾಲೂಕಾ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯದಲ್ಲಿ. ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿ, ಮನೋವೈದ್ಯರಾದ ಡಾಕ್ಟರ್ ರಿತೇಶ್ ಸೂತ್ರವೇರವರು ಶಿಬಿರದಲ್ಲಿ ಹಳೆ 38 ಮಾನಸಿಕ ಅಸ್ವಸ್ಥರನ್ನು ತಪಾಸಣೆಗೆ ಒಳಪಡಿಸಿದರು ಮತ್ತು ಎರಡು ಹೊಸ ಫಲಾನುಭವಿಗಳಿಗೆ ಸಂಸ್ಥೆಯ ಕಾರ್ಯಕರ್ತರಿಂದ ಆಪ್ತ ಸಮಾಲೋಚನೆ ನಡೆಸಿ ಭಾಗವಹಿಸಿದ ಎಲ್ಲಾ ಫಲಾನುಭವಿಗಳಿಗೆ ಸೂಕ್ತವಾದ ಚಿಕಿತ್ಸೆಯನ್ನು ಒದಗಿಸಿಕೊಡುವಲ್ಲಿ ಸಹಾಯ ಮತ್ತು ಸಹಕಾರ ನೀಡಲಾಯಿತೆಂದು. ಬಸವಕಲ್ಯಾಣ ತಾಲೂಕಾ ಕ್ಷೇತ್ರ ಮೇಲ್ವಿಚಾರಕರಾದ ಶ್ರೀ ವಿಜಯಕುಮಾರ್ ರವರು ಮಾಹಿತಿ ನೀಡಿದರು.

## “ಸಂವಿಧಾನ ದಿನ ರಾಷ್ಟ್ರೀಯ ಕಾನೂನು ದಿನ”



26 ನವೆಂಬರ್ 2025ರಂದು ಔರಾದ್ ತಾಲೂಕಿನ ಗಡಿ ಕುಶ್ನೂರ್ ಗ್ರಾಮದಲ್ಲಿ ಆರ್ಬಿಟ್ ಮತ್ತು ಲಿವ್, ಲವ್, ಲಾಫ್ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಭಾರತ ಸಂವಿಧಾನ ದಿನವನ್ನು ಪ್ರತಿ ವರ್ಷ ನವೆಂಬರ್ 26 ರಂದು ಆಚರಿಸಲಾಗುತ್ತದೆ. ಹಾಗೂ ಈ ದಿನವನ್ನು ಸಂವಿಧಾನ ದಿನ, ರಾಷ್ಟ್ರೀಯ ಕಾನೂನು ದಿನ ಎಂದೂ ಕರೆಯುತ್ತಾರೆ ಎಂದು ತಿಳಿಸುತ್ತಾ. ಈದಿನ 1949ರ ನವೆಂಬರ್ 26ರಂದು ಭಾರತೀಯ ಸಂವಿಧಾನವನ್ನು ಅಂಗೀಕರಿಸಲಾಯಿತು. ಮತ್ತು 1950ರ ಜನವರಿ 26ರಿಂದ ಅಮುಲ್ಯವಾಗಿ ಜಾರಿಗೆ ಬಂದಿತು. ಡಾ. ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ರಚನಾ ಸಮಿತಿಯು ಸುಮಾರು 2 ವರ್ಷ 11 ತಿಂಗಳು 18 ದಿನಗಳ ಕಾಲ ಶ್ರಮಿಸಿ ಸಂವಿಧಾನವನ್ನು ರಚಿಸಿತು. 2015ರಲ್ಲಿ ಭಾರತದ ಸರ್ಕಾರ ಈ ದಿನವನ್ನು ಅಧಿಕೃತವಾಗಿ “ಸಂವಿಧಾನ ದಿನ” ಎಂದು ಘೋಷಿಸಿತು ಎಂದು ತಿಳಿಸುತ್ತಾ ನಾಗರಿಕರಲ್ಲಿ ಸಂವಿಧಾನದ ಮಹತ್ವ, ಮೌಲ್ಯಗಳು, ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಇರಬೇಕು ಎನ್ನುತ್ತಾ ಸಂವಿಧಾನ ಪೀಠಿಕೆಯ ಮೂಲಕ ಸಂವಿಧಾನ ದಿನವನ್ನು ಆಚರಿಸಲಾಯಿತು.

## “ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮ”



06 ನವೆಂಬರ್ 2025ರಂದು ಬೀದರ್ ತಾಲೂಕಿನ ಮನ್ನಳ್ಳಿ ಗ್ರಾಮದ ಗ್ರಾಮ ಪಂಚಾಯತ್‌ನಲ್ಲಿ ನವಜೀವನ ಲಿವ್. ಲವ್. ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ಮಾನಸಿಕ ಅಸ್ವಸ್ಥತೆಯ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಾಮಾಜಿಕ ಸೇವಾ ಕಾರ್ಯಕ್ರಮಗಳ ಕುರಿತು ಹಾಗೂ ಗ್ರಾಮ ಪಂಚಾಯತಿಗಳ ಅಡಿಯಲ್ಲಿ ಹಳ್ಳಿಗಳಲ್ಲಿ ಸಲ್ಲಿಸುತ್ತಿರುವ ಮಾನಸಿಕ ಆರೋಗ್ಯ ಕಾರ್ಯಕ್ರಮದ ಮಾಹಿತಿ ತಿಳಿಸಲಾಯಿತು. ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು, ಮಾನಸಿಕ ಅಸ್ವಸ್ಥತೆ ಕುರಿತು ಇರುವ ಕಳಂಕ ಕಡಿಮೆಗೊಳಿಸುವುದು, ಗ್ರಾಮ ಪಂಚಾಯತ್ ಗಳು ತಮ್ಮ ಅಸ್ತಿತ್ವದಲ್ಲಿರುವ ಮೂಲ ಸೌಕರ್ಯಗಳನ್ನು ಒದಗಿಸುವುದು, ವಿಶೇಷ ಚೇತನರಿಗೆ ಮೀಸಲಿಟ್ಟ 5% ಅನುದಾನ ಬಳಕೆ ಮಾಡುವುದು, ಸಾಮಾಜಿಕ ಭದ್ರತಾ ಯೋಜನೆಗಳಾದ ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿಗೆ ಮೊದಲ ಆದ್ಯತೆ ನೀಡುವುದು ನಮ್ಮೆಲ್ಲರ ಕರ್ತವ್ಯವೆಂದು ಮನವರಿಕೆ ಮಾಡುತ್ತಾ ಅವರ ಸಹಕಾರ ಕೋರಲಾಯಿತು. ಈ ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಗಳು ಹಾಗೂ ಎಲ್ಲಾ ಸದಸ್ಯರು ಸೇರಿ ಒಟ್ಟು 12 ಜನರು ಭಾಗವಹಿಸಿದ್ದರು.

## “ಗ್ರಾಮ ಪಂಚಾಯತ್ ಸದಸ್ಯರಿಗೆ ಸಂಪರ್ಕ ಸಂವಾದ ಸಭೆ”



05 ನವೆಂಬರ್ 2025ರಂದು ಬಸವಕಲ್ಯಾಣ ತಾಲೂಕಿನ ಕಿಟ್ಟಾ ಗ್ರಾಮ ಪಂಚಾಯತನಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಕಾರ್ಯಕ್ರಮದ ಲಿವ್. ಲವ್. ಲಾಫ್ ಸಂಯುಕ್ತ ಆಶ್ರಯದಲ್ಲಿ ಗ್ರಾಮ ಪಂಚಾಯತ್ ಸದಸ್ಯರಿಗೆ ಸಂಪರ್ಕ ಸಂವಾದ ಸಭೆಯನ್ನು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಮಹಾದೇವ ಮಾನಕಾರೆರವರು ನಡೆಸಿದರು. ಈ ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆ ಪರಿಚಯ ಮಾನಸಿಕ ಆರೋಗ್ಯ ಕಾರ್ಯಕ್ರಮ ಕುರಿತು ಗ್ರಾಮ ಪಂಚಾಯತ್ ಸದಸ್ಯರು ಮತ್ತು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಸಂಘ ಸಂಸ್ಥೆಗಳ ಸಹಯೋಗದ ಪ್ರಯತ್ನಗಳ ಮೂಲಕ ಮಾನಸಿಕ ಅಸ್ವಸ್ಥರಿಗೆ ಚಿಕಿತ್ಸೆ ಹಾಗೂ ಬೆಂಬಲ ನೀಡುವುದು. ಆರೋಗ್ಯ ಸಂಪನ್ಮೂಲಗಳನ್ನು ಬಳಸುವುದುಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದಲ್ಲಿ ಉಚಿತ ತಪಾಸಣೆ, ಆಪ್ತಸಮಾಲೋಚನೆ ಮತ್ತು ಮಾತ್ರೆಗಳ ಸೌಲಭ್ಯ. ಒಳಗೊಂಡಿರುತ್ತದೆ. ಸಮುದಾಯ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ಮಾನಸಿಕ ಅಸ್ವಸ್ಥರಿಗೆ ಮತ್ತು ಪೋಷಕರಿಗೆ ಸಹಕಾರ ಬೆಂಬಲ ನೀಡುವುದು. ಪಂಚಾಯತ್ ಸಭೆಯಲ್ಲಿ ಮಾನಸಿಕ ಆರೋಗ್ಯ ಹಾಗೂ ವಿಶೇಷ ಚೇತನರಿಗೆ ಮೀಸಲಿಟ್ಟ 5% ಅನುದಾನ ಬಳಕೆ ಕುರಿತು ಚರ್ಚೆ ಮಾಡಲು ತಿಳಿಸಲಾಯಿತು. ಈ ತರಬೇತಿಯಲ್ಲಿ ಪಂಚಾಯತ ಅಭಿವೃದ್ಧಿ ಅಧಿಕಾರಿ ರೇವಣಸಿದ್ದಪ್ಪ, ಕಾರ್ಯದರ್ಶಿ ಮೆಹಬೂಬ್ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಸೇರಿ ಒಟ್ಟು 16 ಜನರು ಭಾಗವಹಿಸಿ ಮಾಹಿತಿ ಪಡೆದರು.

## “ಮಾನಸಿಕ ಆರೋಗ್ಯ ಅರಿವು”



ಬಸವಕಲ್ಯಾಣ ತಾಲೂಕಿನ ತಾಲಾಭಾಗ ಗ್ರಾಮದ ಸರ್ಕಾರಿ ಶಾಲೆಯ ಶಿಕ್ಷಕರಿಗೆ ಸಂಸ್ಥೆಯ ಕಾರ್ಯಕರ್ತರಾದ ಶ್ರೀ.ಆಕಾಶ ರವರು ಮಾನಸಿಕ ಆರೋಗ್ಯ ಅರಿವು ಮೂಡಿಸಿದರು. ಕಳೆದ 33 ವರ್ಷಗಳಿಂದ ಸಂಸ್ಥೆಯು ನಡೆದುಬಂದ ಹಾದಿ ಮಹಿಳೆಯರಿಗೆ, ವೃದ್ಧರಿಗೆ, ಮಕ್ಕಳಿಗೆ, ಅಸ್ವಸ್ಥರಿಗೆ ನೀಡಿದ ಸೇವೆಯ ವರದಿ ನೀಡಲಾಯಿತು. ಇದರೊಂದಿಗೆ ಮಾನಸಿಕ ಅಸ್ವಸ್ಥರ ಲಕ್ಷಣಗಳು, ಕಾರಣಗಳು ಹಾಗೂ ಪಡೆಯಬಹುದಾದ ಸರಕಾರದ ಸೌಲಭ್ಯಗಳ ಕುರಿತು ತಿಳಿಸಲಾಯಿತು. ಅದೇ ಮೇರೆಗೆ ಅಂತಹ ವ್ಯಕ್ತಿಗಳ ಜೊತೆ ಹೇಗೆ ಸಂವಾದಿಸಬೇಕು ಎಂದು ತಿಳಿಹೇಳಲಾಯಿತು.

## “ವಿಶೇಷ ಚೇತನರ ಸಭೆ 5% ಪ್ರತಿಶತ ಸೌಲಭ್ಯಗಳ ಕುರಿತು ಚರ್ಚೆ”



03 ನವೆಂಬರ್ 2025ರಂದು ಬೀದರ್ ತಾಲೂಕಿನ ಮನ್ನಳ್ಳಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ವಿಶೇಷ ಚೇತನರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಭೆಗೆ ಬಂದವರ ಆರೋಗ್ಯವನ್ನು ವಿಚಾರಿಸಿ ಅವರಿಗೆ ತಮ್ಮ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ತಿಳಿಸಿದರು, ಸರ್ಕಾರದಿಂದ ಸಿಗುವಂತಹ 5% ಪ್ರತಿಶತ ಸೌಲಭ್ಯಗಳ ಕುರಿತು, ಪ್ರತಿಯೊಬ್ಬರೂ ಕೂಡ ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿ, ವೃದ್ಧಾಪ ವೇತನ, ಸೌಲಭ್ಯಗಳನ್ನು ಉಚಿತವಾಗಿ ಪಡೆದುಕೊಳ್ಳಬೇಕು. ಹಾಗೆಯೇ ಸರ್ಕಾರದಿಂದ ತಮ್ಮೆಲ್ಲರಿಗೂ ಸಿಗುವಂತ ಎಲ್ಲ ಸೌಲಭ್ಯಗಳನ್ನು ತಾವುಗಳು ಪಡೆದುಕೊಳ್ಳಬೇಕೆಂಬುದಾಗಿ ಈ ಒಂದು ಸಭೆಯಲ್ಲಿ ತಿಳಿಸಿದರು. ಈ ಸಭೆಯಲ್ಲಿ ಯುಡಿಐಡಿ ಕಾರ್ಡ್, ವೃದ್ಧಾಪ ವೇತನ, ಸರ್ಕಾರಿ ಯೋಜನೆಗಳ ಮಾಹಿತಿ ಮತ್ತು ಅನುಷ್ಠಾನ, ಅವರು ಎದುರಿಸುತ್ತಿರುವ ಸವಾಲುಗಳು, ಸರ್ಕಾರದ ಸಾಲ ಸೌಲಭ್ಯಗಳು ಮತ್ತು ಸಬ್ಸಿಡಿ ಗಳ ಕುರಿತು ಚರ್ಚಿಸಲಾಯಿತು. ಈ ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆ ಹಾಗೂ ಎಲ್ಲರೂ ಸೇರಿ ಒಟ್ಟು 08 ಜನರು ಭಾಗವಹಿಸಿದರು.

## “ಭಾರತ ಸಂವಿಧಾನ ದಿನ ಸಂವಿಧಾನ ಪೀಠಿಕೆಯ ಮಹತ್ವ”



26 ನವೆಂಬರ್ 2025ರಂದು ಔರಾದ್ ತಾಲೂಕಿನ ಗಡಿ ಕುಶ್ನೂರ್ ಗ್ರಾಮದಲ್ಲಿ ಆರ್ಬಿಟ್ ಮತ್ತು ಲಿವ್. ಲವ್. ಲಾಫ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸಂವಿಧಾನ ದಿನವನ್ನು ಆಚರಿಸಲಾಯಿತು. ಭಾರತ ಸಂವಿಧಾನ ದಿನವನ್ನು ಪ್ರತಿ ವರ್ಷ ನವೆಂಬರ್ 26 ರಂದು ಆಚರಿಸಲಾಗುತ್ತದೆ ಹಾಗೂ ಈ ದಿನವನ್ನು ಸಂವಿಧಾನ ದಿನ, ರಾಷ್ಟ್ರೀಯ ಕಾನೂನು ದಿನ ಎಂದೂ ಕರೆಯುತ್ತಾರೆಂದು ತಿಳಿಸಲಾಯಿತು. ಈದಿನ 1949ರ ನವೆಂಬರ್ 26ರಂದು ಭಾರತೀಯ ಸಂವಿಧಾನವನ್ನು ಅಂಗೀಕರಿಸಲಾಯಿತು. ಮತ್ತು 1950ರ ಜನವರಿ 26ರಿಂದ ಅಮುಲ್ಯವಾಗಿ ಜಾರಿಗೆ ಬಂದಿತು. ಡಾ. ಬಿ. ಆರ್ ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ರಚನಾ ಸಮಿತಿಯು ಸುಮಾರು 2 ವರ್ಷ 11 ತಿಂಗಳು 18 ದಿನಗಳ ಕಾಲ ಶ್ರಮಿಸಿ ಸಂವಿಧಾನವನ್ನು ರಚಿಸಿತು. 2015ರಲ್ಲಿ ಭಾರತದ ಸರ್ಕಾರ ಈ ದಿನವನ್ನು ಅಧಿಕೃತವಾಗಿ “ಸಂವಿಧಾನ ದಿನ” ಎಂದು ಘೋಷಿಸಿತು. ನಾಗರಿಕರಲ್ಲಿ ಸಂವಿಧಾನದ ಮಹತ್ವ, ಮೌಲ್ಯಗಳು, ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿ ಇರಬೇಕು ಎನ್ನುತ್ತಾ ಸಂವಿಧಾನ ಪೀಠಿಕೆಯ ಮೂಲಕ ಸಂವಿಧಾನ ದಿನವನ್ನು ಆಚರಿಸಲಾಯಿತು.

## “ಆರೈಕೆದಾರರ ಸಭೆ ಮಾನಸಿಕ ಅಸ್ವಸ್ಥರ ಹಕ್ಕುಗಳು ಹಾಗೂ ಸಾಮಾಜಿಕ ಭದ್ರತಾ ಯೋಜನೆ”



10 ನವೆಂಬರ್ 2025ರಂದು ಬೀದರ್ ತಾಲೂಕಿನ ಯೆರನಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್, ಲವ್, ಲಾಫ್ ಫೌಂಡೇಶನ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತರಾದ ಆನಂದರವರು ಆರೈಕೆದಾರರ ಸಭೆಯನ್ನು ಹಮ್ಮಿಕೊಂಡರು. ಈ ಸಭೆಯ ಮುಖ್ಯ ಉದ್ದೇಶವೇನೆಂದರೆ ಮಾನಸಿಕ ಅಸ್ವಸ್ಥರನ್ನು ಪ್ರತಿಯೊಬ್ಬರು ಪ್ರೀತಿಯಿಂದ, ಗೌರವದಿಂದ ಕಾಣಬೇಕು, ಮತ್ತು ಮಾನಸಿಕ ಅಸ್ವಸ್ಥರ ಹಕ್ಕುಗಳು ಹಾಗೂ ಸಾಮಾಜಿಕ ಭದ್ರತಾ ಯೋಜನೆಗಳಾದ ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿ, ವೃದ್ಧಾಪ ವೇತನ ಮುಂತಾದ ಯೋಜನೆಗಳ ಲಾಭವನ್ನು ಪಡೆದುಕೊಳ್ಳಬೇಕು ಎಂಬುದು ಈ ಸಭೆಯ ಮುಖ್ಯ ಉದ್ದೇಶವಾಗಿರುತ್ತದೆ. ಸಭೆಯಲ್ಲಿ ಚರ್ಚಿಸಿದ ಅಂಶಗಳು:– ಒತ್ತಡ ನಿರ್ವಹಣೆ, ಸರ್ಕಾರಿ ಯೋಜನೆಗಳ ಮಾಹಿತಿ ಮತ್ತು ಅನುಷ್ಠಾನ, ಅವರು ಎದುರಿಸುತ್ತಿರುವ ಸವಾಲುಗಳು, ಸಂಘಟನೆಯಲ್ಲಿ ಸಂಪನ್ಮೂಲ ಕ್ರೂಡೀಕರಣ, ಸರ್ಕಾರದ ಸಾಲ ಸೌಲಭ್ಯಗಳು ಮತ್ತು ಸಬ್ಸಿಡಿಗಳ ಮಾಹಿತಿ. ಈ ಸಭೆಯಲ್ಲಿ ಒಟ್ಟು 7 ಆರೈಕೆದಾರರು ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರಿಗೆ ಆರೋಗ್ಯ ಮತ್ತು ಯೋಗದ ಬಗ್ಗೆ ತರಬೇತಿ”



04 ನವೆಂಬರ್ 2025ರಂದು ಬಸವಕಲ್ಯಾಣ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಅಸ್ವಸ್ಥರಿಗೆ ಆರೋಗ್ಯ ಮತ್ತು ಯೋಗದ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯು ಆರ್ಬಿಟ್ ಸಂಸ್ಥೆಯ ಮತ್ತು ಲಿವ್, ಲವ್, ಲಾಫ್ ಸಂಯುಕ್ತ ಆಶ್ರಯದಲ್ಲಿ ಆಪ್ತ ಸಮಾಲೋಚಕರಾದ ಶ್ರೀಮತಿ ರೂಪಾಲಿ ಯವರು ನಡೆಸಿ ಕೊಟ್ಟರು. ಯೋಗ ಎಂದರೆ ಏಕೀಕರಣ, ಸಂಯೋಗ ಅಥವಾ ಒಂದಾಗುವಿಕೆ ಎಂದು ತಿಳಿಸುತ್ತಾ ಯೋಗ ದೇಹ, ಮನಸ್ಸು ಮತ್ತು ಆತ್ಮದ ಏಕೀಕರಣದ ಪ್ರಕ್ರಿಯೆ ಹಾಗೂ ಇದರ ಪ್ರಮುಖ ಅಂಶಗಳು:ಆಸನ, ಪ್ರಾಣಾಯಾಮ, ಧ್ಯಾನಪ್ರತ್ಯಾಹಾರ ಎಂದು ಚಟುವಟಿಕೆಯ ಮೂಲಕ ತರಬೇತಿ ನೀಡಲಾಯಿತು. ಈ ತರಬೇತಿಯಲ್ಲಿ 12 ಜನರು ಭಾಗವಹಿಸಿದ್ದರು.

## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೈಕೋ ಸೋಶಿಯಲ್ ಎಜುಕೇಶನ್ ತರಬೇತಿ”



03 ನವೆಂಬರ್ 2025ರಂದು ಬೀದರ್ ತಾಲೂಕಿನ ಜನವಾಡ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೈಕೋ ಸೋಶಿಯಲ್ ಎಜುಕೇಶನ್ ಬಗ್ಗೆ ತರಬೇತಿ ನೀಡಲಾಯಿತು. ಈ ತರಬೇತಿಯನ್ನು ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚನೆಕರಾದ ಶ್ರೀಮತಿ ರೂಪಾಲಿಯವರು ನಡೆಸಿಕೊಡಲಾಯಿತು. ಸೈಕೋ ಸೋಶಿಯಲ್ ಎಜುಕೇಶನ್ ಎಂದರೆ ವ್ಯಕ್ತಿಯ ಮನಸ್ಸು, ಭಾವನೆಗಳು, ಸಾಮಾಜಿಕ ವರ್ತನೆಗಳು ಮತ್ತು ಮಾನವ ಸಂಬಂಧಗಳು ಹೇಗೆ ಬೆಳೆಯುತ್ತವೆ ಎಂಬುದರ ಅರಿವು ನೀಡುವ ಶಿಕ್ಷಣ. ಇದರ ಉದ್ದೇಶಗಳು, ಫಲನುಭವಿಗಳಲ್ಲಿ ಆತ್ಮವಿಶ್ವಾಸ ಮತ್ತು ಆತ್ಮಗೌರವ ಬೆಳೆಸುವುದು, ಇತರರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಸಹಾನುಭೂತಿ ಬೆಳೆಸುವುದು, ಒತ್ತಡ, ದುಃಖ, ಕೋಪ ಮುಂತಾದ ಭಾವನೆಗಳನ್ನು ನಿಭಾಯಿಸುವ ಸಾಮರ್ಥ್ಯ ಕಲಿಸುವುದು, ಸಮೂಹದಲ್ಲಿ ಕೆಲಸ ಮಾಡುವ ಶಕ್ತಿ ಮತ್ತು ಸಮಾಜಪರ ವರ್ತನೆ ಬೆಳೆಸುವುದು, ಮಾನವ ಸಂಬಂಧಗಳು, ಸಂವಹನ ಕೌಶಲ್ಯಗಳು, ಸಂಘರ್ಷ ನಿರ್ವಹಣೆ ಮುಂತಾದ ವಿಷಯಗಳಲ್ಲಿ ತರಬೇತಿ ಪಡೆಯುವುದು ಎಂದು ತಿಳಿಸಲಾಯಿತು. ಈ ತರಬೇತಿಯಲ್ಲಿ ದಿನನಿತ್ಯದ ಉಸಿರಾಟದ ಪ್ರಕ್ರಿಯೆಯನ್ನು ಚಟುವಟಿಕೆಯ ಮೂಲಕ ಮಾಡಿಸಲಾಯಿತು. ಈ ತರಬೇತಿಯಲ್ಲಿ 12 ಜನ ಫಲನುಭವಿಗಳು ಭಾಗಿಯಾಗಿದರು.

## “ಮಾನಸಿಕ ಆರೋಗ್ಯದ ಜಾಗೃತಿ ಕಾರ್ಯಕ್ರಮ”



28 ನವೆಂಬರ್ 2025ರಂದು ಮಾನಸಿಕ ಆರೋಗ್ಯದ ಮೇಲೆ ಜಾಗೃತಿ ಕಾರ್ಯಕ್ರಮವನ್ನು ಹುಲಸೂರ ತಾಲ್ಲೂಕಿನ ಹಾಲಹಳ್ಳಿ ಗ್ರಾಮದಲ್ಲಿ ಮಾಡಲಾಯಿತು. ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್, ಲವ್, ಲಾಫ್ ಫೌಂಡೇಶನ್ ಸಹಯೋಗದಲ್ಲಿ ಆಯೋಜನೆಯಾದ. ಈ ಕಾರ್ಯಕ್ರಮವನ್ನು ಕಾರ್ಯಕರ್ತರಾದ ಲಕ್ಷ್ಮೀ ಅವರು ನಡೆಸಿದರು.ಈ ಒಂದು ಕಾರ್ಯಕ್ರಮದಲ್ಲಿ ಮಾನಸಿಕ ಅಸ್ವಸ್ಥತ ಎಂದರೇನು? ಅದು ಹೇಗೆ ಬರುತ್ತದೆ? ಮತ್ತು ಅದನ್ನು ಹೇಗೆ ಕಡಿಮೆ ಮಾಡಬಹುದು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಲಾಯಿತು. “ಆರೋಗ್ಯವು ಕೇವಲ ದೇಹದ ಆರೋಗ್ಯವಲ್ಲ; ಮನಸ್ಸಿನ ಸದೃಢತೆ ಮತ್ತು ಸುತ್ತಲಿನ ಸಂಬಂಧಗಳ ಸಮತೋಲನವೂ ಅತಿಮುಖ್ಯ. “ಈ ಕಾರ್ಯಕ್ರಮದಲ್ಲಿ ಖಿನ್ನತೆ, ಆತಂಕ ಮತ್ತು ಭಯಗಳ ಕುರಿತು ವಿವರವಾಗಿ ಮಾಹಿತಿ ನೀಡಲಾಯಿತು. ಜೊತೆಗೆ, ಮಾನಸಿಕ ಸಮಸ್ಯೆಗಳನ್ನು ತಡೆಯುವುದು ಮತ್ತು ಬದಲಾವಣೆಗೆ ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆಯುವ ಮಹತ್ವ ಸೂಕ್ಷ್ಮವಾಗಿ ಚರ್ಚಿಸಲಾಯಿತು. ಹುಲಸೂರ್ ತಾಲೂಕ ಸಮುದಾಯ ಆರೋಗ್ಯ ಕೇಂದ್ರದ ಆಸ್ಪತ್ರೆಯಲ್ಲಿ ಉಚಿತ ಮಾನಸಿಕ ತಪಾಸಣಾ ಶಿಬಿರ ಪ್ರತಿ ತಿಂಗಳ ಎರಡನೇ ಶುಕ್ರವಾರ ನಡೆಯುತ್ತದೆ ಮತ್ತು ಬಸವಕಲ್ಯಾಣ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ಶಿಬಿರ ನಡೆಯುತ್ತದೆ ಎಂಬುದರ ಬಗ್ಗೆ ಮಾಹಿತಿ ನೀಡಲಾಯಿತು ಎಂದು ತಿಳಿಸುತ್ತಾ ಅರಿವು ಮೂಡಿಸಲಾಯಿತು.

## “ಮಾನಸಿಕ ಅಸ್ವಸ್ಥತೆ ಎಂಬುದು ಕೇವಲ ರೋಗವಲ್ಲ”



01 ನವೆಂಬರ್ 2025ರಂದು ಔರಾದ್ ತಾಲೂಕಿನ ಹೆಡ್ಗಪುರ ಗ್ರಾಮದಲ್ಲಿ, ಆರ್ಬಿಟ್ ಸಂಸ್ಥೆ ವತಿಯಿಂದ ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯ ಕೋರುತ್ತಾ, ಆರ್ಬಿಟ್ ಸಂಸ್ಥೆ ಮತ್ತು LLLF ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮವನ್ನು ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೋಹನ್ ರವರು ನಡೆಸಿಕೊಡಲಾಯಿತು. ನೆರೆದಿದ್ದ ಜನರನ್ನು ಉದ್ದೇಶಿಸಿ, “ಮಾನಸಿಕ ಅಸ್ವಸ್ಥತೆ ಎಂಬುದು ಕೇವಲ ರೋಗವಲ್ಲ, ಅದು ನಮ್ಮ ದಿನನಿತ್ಯದ ಒತ್ತಡ, ಕಳವಳ ಹಾಗೂ ಜೀವನ ಶೈಲಿಯ ಪ್ರತಿಫಲ. ಇದನ್ನು ಲಜ್ಜೆಯ ವಿಷಯವನ್ನಾಗಿ ನೋಡದೆ ಚಿಕಿತ್ಸೆ ಪಡೆಯುವುದು ಅತ್ಯಂತ ಮುಖ್ಯ” ಎಂದು ಹೇಳಿದರು. ಮಾನಸಿಕ ಅಸ್ವಸ್ಥತೆ ಅಂದರೆ ವ್ಯಕ್ತಿಯ ಭಾವನೆ, ಚಿಂತನೆ, ವರ್ತನೆ ಮತ್ತು ಸಾಮಾಜಿಕ ಬದುಕಿನಲ್ಲಿ ಅಸಮತೋಲನ ಉಂಟಾಗಿರುವ ಸ್ಥಿತಿ. ಇದು ತಾತ್ಕಾಲಿಕವಾಗಿಯೂ ಇರಬಹುದು ಅಥವಾ ದೀರ್ಘಕಾಲದ ಸಮಸ್ಯೆಯಾಗಿಯೂ ಇರಬಹುದು ಇದರ ಕುರಿತು ಜಾಗೃತಿ ವಹಿಸುವುದು ಉತ್ತಮ ಎಂದು ತಿಳಿಸಲಾಯಿತು. ಇದರಲ್ಲಿ ಮುಖ್ಯ ಗುಣಲಕ್ಷಣಗಳು. ಚಿಂತನೆ ಮತ್ತು ಗ್ರಹಣದ ವ್ಯತ್ಯಾಸ, ಯುಕ್ತಿಯಿಲ್ಲದ, ಅಸಂಬದ್ಧ ಆಲೋಚನೆಗಳು. ವಾಸ್ತವಿಕತೆಯನ್ನು ತಪ್ಪಾಗಿ ಗ್ರಹಿಸುವುದು. ಭ್ರಮೆಗಳು ಅಸತ್ಯವಾದ ದೃಶ್ಯ/ಶಬ್ದಗಳನ್ನು ಅನುಭವಿಸುವುದು. ಭಾವನಾತ್ಮಕ ಅಸಮತೋಲನ, ಅತಿಯಾದ ದುಃಖ, ಕೋಪ, ಅಥವಾ ಭಯಭಾವನೆಗಳಲ್ಲಿ ತೀವ್ರ ಏರುಪೇರು ಒಂದು ಕ್ಷಣ ಸಂತೋಷ, ಮತ್ತೊಂದು ಕ್ಷಣ ಅಳುವು. ಅಲ್ಪ ಕಾರಣಕ್ಕೂ ತೀವ್ರ ಪ್ರತಿಕ್ರಿಯೆ ನೀಡುವುದು. ವರ್ತನೆಯಲ್ಲಿ ಬದಲಾವಣೆ, ಇತರರಿಂದ ದೂರ ಉಳಿಯುವುದು ನಿದ್ರೆಯ ಮಾದರಿಯಲ್ಲಿ ಬದಲಾವಣೆ. ಹೆಚ್ಚು ನಿದ್ರೆ ಅಥವಾ ನಿದ್ರೆ ಬರದಿರುವುದು. ಆಹಾರ ಸೇವನೆ ಕಡಿಮೆ ಅಥವಾ ಹೆಚ್ಚಾಗುವುದು ಎಂದು ಮಾಹಿತಿ ನೀಡಲಾಯಿತು. ಗ್ರಾಮದಲ್ಲಿ ಇಂತಹ ಲಕ್ಷಣಗಳ ಕಂಡು ಬಂದಲ್ಲಿ ಆರ್ಬಿಟ್ ಸಂಸ್ಥೆಯ ಸಹಾಯವಾಣಿಯಾದ ನಂಬರ್ 9036664271 ಗೆ ಕರೆ ಮಾಡಿ ಮಾಹಿತಿ ನೀಡುವುದು ಎಂದು ಜಾಗೃತಿ ಮೂಡಿಸಲಾಯಿತು ಹಾಗೆ ತಿಂಗಳಿನ ಎರಡನೇ ಶುಕ್ರವಾರದಂದು ಸಂತಪುರ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಮಾನಸಿಕ ಶಿಬಿರವು ನಡೆಯುತ್ತದೆ ಈ ಶಿಬಿರದಲ್ಲಿ ಮನೋವೈದ್ಯರು ಬಂದು ಉಚಿತವಾದ ಚಿಕಿತ್ಸೆಯನ್ನು ನೀಡುವುದಾಗಿ ತಿಳಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಗ್ರಾಮದ 14 ಜನರು ಭಾಗಿಯಾಗಿದ್ದರು.

# “ಮಹಿಳಾ ಸಬಲೀಕರಣ ಯೋಜನೆಯಕಾರ್ಯಕ್ರಮ”

## “ಸಂಜನಾ ಮಹಾಸಂಗದ ಮಹಿಳೆಯರಿಗೆ ಮಹಾಸಂಘ ಬಲವರ್ಧನೆ ಕುರಿತು ತರಬೇತಿ”




ಹುಮ್ನಾಬಾದ್ ತಾಲೂಕಿನ ದುಮ್ಮನಸೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು 10 ನವೆಂಬರ್ 2025ರಂದು ಸಂಜನಾ ಮಹಾಸಂಗದ ಮಹಿಳೆಯರಿಗೆ ಮಹಾಸಂಘ ಬಲವರ್ಧನೆ ಕುರಿತು ತರಬೇತಿಯನ್ನು ನಡೆಸಲಾಗಿದ್ದು. ಮಹಾ ಸಂಘಗಳು ಒಂದೇ ಗುರಿ ಉದ್ದೇಶ ಸಮಾನ ಅಸಕ್ತಿಯನ್ನು ಇಟ್ಟುಕೊಂಡು 5 ರಿಂದ 10 ಸಂಘಗಳ ನೊಳಗೊಂಡು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುವ ವೇದಿಕೆಯಾಗಿ ಸ್ವ ಇಚ್ಛೆಯಿಂದ ಹಾಗೂ ಕ್ರಿಯಾಶೀಲರಾಗಿ ದುಡಿಯುತ್ತಿರುವ ಮಹಾಸಂಘ ಆಗಿರಬೇಕು. ಅದರಿಂದ ಮಹಾಸಂಗದ ಸದಸ್ಯತ್ವ ಹೊಂದಿದ್ದ ಪ್ರತಿಯೊಬ್ಬ ಸದಸ್ಯರು ನಾಯಕರಾಗಿ ಸ್ವ ಇಚ್ಛೆಯಿಂದ ತಮ್ಮ ಕಾರ್ಯ ವೈಖರಿಗಳನ್ನು ನಿರ್ವಹಿಸುವಬೇಕು. ಸಂಘಟನೆ ಮತ್ತು ಬಲ ಹೊಂದಿದವರಾಗಬೇಕು. ಪ್ರತಿ ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ನಡೆಸತಕ್ಕದ್ದು, ಸ್ವಸಹಾಯ ಸಂಘಗಳ ಪ್ರಗತಿ ಪರಿಶೀಲನೆ ಮಾಡುವುದು, ಸಂಘಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಮತ್ತು ಪರಿಹಾರ ಮಾಡುವುದು. ಮಹಾಸಂಗದ ಮೂಲಕ ಮಹಿಳೆ ಮತ್ತು ಮಕ್ಕಳ ಮೇಲಾಗುವ ಶೋಷಣೆಯ ವಿರುದ್ಧ ಕಾರ್ಯಾಚರಣೆ ಮಾಡುವುದು. ಮಹಾಸಂಘಕ್ಕೆ ಸೀಮಿತವಾದ ಪ್ರತಿಯೊಂದು ದಾಖಲೆಗಳು ಕ್ರಮಬದ್ಧವಾಗಿ ಇಡುವುದು. ಸಮುದಾಯಕ್ಕೆ ಮಾದರಿಯಾಗಿ ತೋರಿಸುವಂತಹ ಮಹಾಸಂಗ ವಾಗಿರಬೇಕು ಎಂದು ಹಲವಾರು ವಿಷಯಗಳ ಕುರಿತು ತಿಳಿಸಲಾಗಿದ್ದು. ಇದರಲ್ಲಿ 22 ಸದಸ್ಯರು ಭಾಗವಹಿಸಿ ಮಹಾಸಂಘ ಬಲವರ್ಧನೆಯಿಂದ ಆಗುವ ಪ್ರಯೋಜನದ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## “ಜನಶಕ್ತಿ ತಾಲೂಕ ಒಕ್ಕೂಟದ ಸಭೆ”



19 ನವೆಂಬರ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ಜನಶಕ್ತಿ ತಾಲೂಕ ಒಕ್ಕೂಟದ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ನಿರ್ಮಲ ಮಹಿಳಾ ಸಬಲೀಕರಣ ಯೋಜನೆ ಸಂಯೋಜಕರು ಒಕ್ಕೂಟಗಳ ಬಲವರ್ಧನೆ ಕುರಿತು ಮಾಹಿತಿಯನ್ನು ನೀಡುತ್ತಾ, ಎಲ್ಲರೂ ನಾಯಕತ್ವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ತಿಳಿಸಿದರು. ತಾಲೂಕ ಒಕ್ಕೂಟಕ್ಕೆ ಹಾಜರಾಗದ ಮಹಾಸಂಗದವರಿಗೆ ಹಾಜರಿದ್ದ ಮಹಾಸಂಗದವರು ಭೇಟಿ ನೀಡಿ ಮುಂದಿನ ಸಭೆಗೆ ಕಡ್ಡಾಯವಾಗಿ ಬರುವಂತೆ ನೋಡಿಕೊಳ್ಳಬೇಕೆಂದು ಜವಾಬ್ದಾರಿ ವಹಿಸಿದರು. ಒಕ್ಕೂಟಗಳಲ್ಲಿ ಮಾಡುವಂತಹ ಕೆಲಸಕಾರ್ಯಗಳ ಕುರಿತು ಕ್ರಿಯಾಯೋಜನೆ ಮಾಡುವುದರ ಕುರಿತು ಚರ್ಚಿಸಲಾಯಿತು. ಒಕ್ಕೂಟದ ಸಭೆಯಲ್ಲಿ ತಾವರೆ ಮಹಾಸಂಗದವರು ಪ್ರಾರ್ಥನೆ ಮಾಡಿದರು, ಗಾಂಧಿ ಮಹಾಸಂಗದವರು ಸ್ವಾಗತಿಸಿದರು, ಮಲ್ಲಿಗೆ ಮಹಾಸಂಗದವರು ಸಂವಿಧಾನ ಪೀಠಿಕೆಯನ್ನು ಓದಿಸಿ ಎಲ್ಲರಲ್ಲಿ ಭಾತೃತ್ವ ಭಾವನೆಯನ್ನು ಮೂಡಿಸಿದರು. ಪ್ರೇಮಾಂಜಲಿ ಮಹಾಸಂಗದ ಸದಸ್ಯರು ಧನ್ಯವಾದ ಮಾಡಿದರು ಪ್ರತಿಯೊಬ್ಬರು ನಾಯಕತ್ವದ ಜವಾಬ್ದಾರಿಯನ್ನು ತೆಗೆದುಕೊಂಡು ನಾಯಕತ್ವವನ್ನು ಕುರಿತು ಅರಿತುಕೊಂಡಿದ್ದಾರೆ.

## “ಆಂತರಿಕ ಮತ್ತು ಬಾಹ್ಯ ಲಿಂಗ ಪ್ರೇರಣ ತಂಡದ ಸದಸ್ಯರಿಗೆ ಸಾಮರ್ಥ್ಯ ಬಲವರ್ಧನೆ ತರಬೇತಿ”



17 ನವೆಂಬರ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ಆಂತರಿಕ ಮತ್ತು ಬಾಹ್ಯ ಲಿಂಗ ಪ್ರೇರಣ ತಂಡದ ಸದಸ್ಯರಿಗೆ ಸಾಮರ್ಥ್ಯ ಬಲವರ್ಧನೆ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಮತಿ ನಿರ್ಮಲ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು ಪ್ರಾಥಮಿಕ ನುಡಿಯಲ್ಲಿ ಸಂಸ್ಥೆಯು ಮಾಡುವಂತಹ ಕೆಲಸ ಕಾರ್ಯಗಳ ಕುರಿತು ತಿಳಿಸಿದರು. ಫಾದರ್ ವಿಕ್ಟರ್ ವಾಸ್ ನಿರ್ದೇಶಕರು ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಇವರು ಪ್ರೇರಣ ತಂಡದ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಯ ಕುರಿತು ವಿವರಿಸಿ ಶುಭವನ್ನು ಕೋರಿದರು. ಶ್ರೀಯುತ ಅರಳಪ್ಪ ಮಹಿಳಾ ಸಬಲೀಕರಣ ಯೋಜನೆಯ



ಸಂಯೋಜಕರು ಬಿಡಿಡಿಎಸ್ ಸಂಸ್ಥೆ ಬಳ್ಳಾರಿ, ಇವರು ಸಂಪನ್ಮೂಲ ವ್ಯಕ್ತಿಯಾಗಿದ್ದು ಲಿಂಗ ಮತ್ತು ಲಿಂಗತ್ವ ವ್ಯತ್ಯಾಸದ ಕುರಿತು ವಿವರಿಸುತ್ತ ಗಂಡು ಮತ್ತು ಹೆಣ್ಣಿನಲ್ಲಿರುವ ಗುಣಗಳ ಕುರಿತು ನಾಲ್ಕು ಗುಂಪುಗಳಾಗಿ ವಿಂಗಡಿಸಿ ಶಿಬಿರಾರ್ಥಿಗಳಿಗೆ ಉತ್ತರವನ್ನು ಬರೆಯಲು ತಿಳಿಸಿ ಅದರ ಮೇಲೆ ವಿವರಣೆಯನ್ನು ನೀಡಿದರು.ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಂಸ್ಕೃತಿಕ ಕ್ಷೇತ್ರಗಳಲ್ಲಿ ಅಸಮಾನತೆ ಎದ್ದು ಕಾಣುತ್ತಿದೆ ಇದನ್ನು ಹೋಗಲಾಡಿಸಲು ಶಿಕ್ಷಣವೇ ಮೂಲ ಮಂತ್ರವಾಗಿದೆ ಎಂದು ಸಂಕ್ಷಿಪ್ತವಾಗಿ ವಿವರಿಸಿದ್ದರು.ಈ ತರಬೇತಿಯಲ್ಲಿ ನಿರ್ದೇಶಕರು ಸಹ ನಿರ್ದೇಶಕರು ಕಾರ್ಯಕ್ರಮಗಳ ವ್ಯವಸ್ಥಾಪಕರು ಮಹಿಳಾ ಸಬಲೀಕರಣ ಯೋಜನೆಯ ಸಿಬ್ಬಂದಿ ವರ್ಗದವರು ಹಾಗು ಶಿಬಿರಾರ್ಥಿಗಳು ಸೇರಿದಂತೆ ಒಟ್ಟು 38 ಸದಸ್ಯರು ಭಾಗವಹಿಸಿ ಲಿಂಗ ಸಮಾನತೆಯ ಕುರಿತು ಅರಿತುಕೊಂಡರು.

## “ಮಹಾಸಂಘ ಬಲವರ್ಧನ ಕುರಿತು ತರಬೇತಿ”



21 ನವಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೆರೆ ಗ್ರಾಮದಲ್ಲಿ ಮಹಾಸಂಗದ ಸದಸ್ಯರಿಗೆ ಶ್ರೀಮತಿ ಅಮಿತಾ ರವರು ಮಹಾಸಂಘ ಬಲವರ್ಧನ ಕುರಿತು ತರಬೇತಿನ ಹಮ್ಮಿಕೊಂಡಿದ್ದರು. ಶ್ರೀಮತಿ ನಿರ್ಮಲ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು.ಮಹಾಸಂಗದ ಗುರಿ, ಮಹಿಳಾ ಸ್ವಸಾಯ ಸಂಘಗಳು ಮತ್ತು ಸಮುದಾಯದ ಸರ್ವತೋಮುಖ ಅಭಿವೃದ್ಧಿ ಎಂದು ತಿಳಿಸಿದರು. ಮಹಾಸಂಗದ ಉದ್ದೇಶಗಳು ಮಾದರಿ ಸಂಘಗಳನಾಗಿ ರೂಪಿಸುವುದು, ಹಕ್ಕುಗಳ ಮೂಲಕ ಹೋರಾಡುವುದು, ಸಮುದಾಯದ ಸಮಸ್ಯೆಗಳನ್ನು ಗುರುತಿಸಿ ಅರ್ಜಿ ಕೊಡುವುದರ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು, ಮಹಿಳೆಯರ ಮೇಲೆ ಆಗುವಂತ ಅತ್ಯಾಚಾರ, ದೌರ್ಜನ್ಯ, ಕೌಟುಂಬಿಕ ಹಿಂಸೆಗಳು ವಿರುದ್ಧ ಧ್ವನಿ ಎತ್ತಿ ನಿಲ್ಲಲು ಹಾಗೂ ವಿವಿಧ ಇಲಾಖೆ ಯೊಂದಿಗೆ ಜಾಲ ಬಂದ ಬೆಳೆಸಿಕೊಂಡು ಕೆಲಸ ಕಾರ್ಯಗಳನ್ನು ಮಾಡಲು ಈ ಮಹಾಸಂಗವು ಸಹಕಾರಿಯಾಗಿದೆ. ಇದರಿಂದ ಬಹಳಷ್ಟು ಉಪಯೋಗಗಳನ್ನು ಮಾಡಿಕೊಳ್ಳಬೇಕೆಂದು ಮಾಹಿತಿ ನೀಡಿದರು.

## “ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ”



18 ನವೆಂಬರ್ 2025ರಂದು ಬಾಲ್ಕಿ ತಾಲೂಕಿನ ಹುಣಜಿ ಗ್ರಾಮದಲ್ಲಿರುವ ಆತ್ಮಜ್ಯೋತಿ ಮಹಾಸಂಗದ ಸಭೆಯನ್ನ ಪ್ರಾರ್ಥನೆ ಗೀತೆಯ ಮೂಲಕ ಪ್ರಾರಂಭಿಸಲಾಯಿತು. ತದನಂತರ ಮಹಿಳಾ ಸಬಲೀಕರಣ ಕಾರ್ಯಕರ್ತರಾದ ಶ್ರೀ ಪ್ರಭುರವರು ಸಂವಹನ ಕಲೆ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ ನೀಡಿದರು. ಈ ಮಹಾಸಂಗದ ಸದ್ಯಸರಿಗೆ ವಿವಿಧ ಮಾಧ್ಯಮಗಳ ಜೊತೆ ಸಂಪರ್ಕ ಹೊಂದುವಂತೆ ಹೇಗೆ ಎಂಬುದರ ಬಗ್ಗೆ ವಿವರಣೆ ನೀಡಲಾಯಿತು. ತದನಂತರ ಪ್ರತಿದಿನ ಮಹಿಳೆಯರು ಟಿವಿ ಮತ್ತು ನ್ಯೂಸ್ ಪೇಪರ್ ಮೂಲಕ ವಿವಿಧ ವಿಷಯಗಳನ್ನ ತಿಳಿದುಕೊಳ್ಳುವುದು ಜೊತೆಗೆ ಸಂವಹನ ಕೌಶಲ್ಯಗಳನ್ನು ಮಾಹಿತಿಯನ್ನು ತಿಳಿದುಕೊಳ್ಳುವುದು ಅದರ ಜೊತೆಗೆ ತಮ್ಮ ವಠಾರದಲ್ಲಿ ಬರುವಂತ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರವನ್ನು ಹುಡುಕುವುದರಲ್ಲಿ ತಾವು ಮುಂದಾಗಬೇಕು. ಅದರ ಜೊತೆಗೆ ತಮ್ಮ ಸಂಘವನ್ನು ಬಲಿಷ್ಠವಾಗಿ ಇಟ್ಟುಕೊಳ್ಳುವುದು ಯಾವ ಸಮಸ್ಯೆಗಳಿಗೆ ಮಹಿಳೆಯರು ಅಥವಾ ಸ್ವಸಹಾಯ ಸಂಘದ ಸದಸ್ಯರು ಮಾಸಂಗದ ಸಭೆಯಲ್ಲಿ ಸಂವಹನ ಮತ್ತು ಪರಿಣಾಮಕಾರಿ ಆಲಿಸುವಿಕೆ ಕುರಿತು ತರಬೇತಿ ನೀಡಲಾಯಿತು. ಕೊನೆಗೆ ಧನ್ಯವಾದ ಮೂಲಕ ಅಂದಿನ ಮಹಾಸಂಗದ ಸಭೆಯನ್ನ ಸರಿಯಾಗಿ 12:30ಕ್ಕೆ ಮುಕ್ತಾಯ ಮಾಡಲಾಯಿತು.

## “ದಾಖಲಾತಿ ನಿರ್ವಹಣೆ ಕುರಿತು ತರಬೇತಿ”



19 ನವೆಂಬರ್ 2025ರಂದು ಬಾಲ್ಕಿ ತಾಲೂಕಿನ ಕೋಸಂ ಗ್ರಾಮದಲ್ಲಿರುವ ಪ್ರೇಮ ಜ್ಯೋತಿ ಮಹಾಸಂಗದ ಸಭೆಯನ್ನು ಸರಿಯಾಗಿ 11 ಗಂಟೆಗೆ ಪ್ರಾರ್ಥನೆ ಗೀತೆಯೊಂದಿಗೆ ಮತ್ತು ಸ್ವಾಗತ ಮೂಲಕ ಪ್ರಾರಂಭಿಸಲಾಯಿತು. ಈ ಸಭೆಯಲ್ಲಿ ದಾಖಲಾತಿ ನಿರ್ವಹಣೆ ಕುರಿತು ಬ್ರದರ್ ನೆನ್ಸಿ ರವರು ಮಾಹಿತಿ ನೀಡಿದರು. ದಾಖಲಾತಿ ಎಂದರೇನು? ನಿಮ್ಮ ಸ್ವಸಹಾಯ ಸಂಘದ ಪುಸ್ತಕಗಳು ಎಷ್ಟು, ಅದರ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದು ಪ್ರಶ್ನಿಸುತ್ತಾ ತರಬೇತಿಯನ್ನು ಪ್ರಾರಂಭಿಸಲಾಯಿತು. ಮಹಿಳೆಯರು ಸಂಘದ ಲೆಕ್ಕಚಾರವನ್ನು ತಮಗೆ ತಿಳಿಯುವುದು ಅದರ ಜೊತೆಗೆ ಇತರರಿಗೆ ತಿಳಿಸುವುದು. ಈ ಸಾಮರ್ಥ್ಯಯನ್ನು ಹೊಂದುವಂತೆ ತಿಳಿಸಿದರು. ತದನಂತರ ತಮ್ಮ ಸ್ವಸಹಾಯ ಸಂಘದ ಆದಾಯವನ್ನು ಪ್ರತಿವರ್ಷ ಲೆಕ್ಕಾಚಾರ ಪರಿಶೀಲನೆ ಮಾಡುವುದು ಕಡ್ಡಾಯವಾಗಿ ಇರಬೇಕು. ಜೊತೆಗೆ ತಮ್ಮ ಸ್ವಸಾಯದ ಸಂಘದ ಪ್ರತಿಯೊಂದು ಪುಸ್ತಕಗಳನ್ನ ಉತ್ತಮ ರೀತಿಯಾಗಿ ಇಟ್ಟುಕೊಳ್ಳುವುದು ತಮ್ಮ ವ್ಯವಹಾರ ಕೂಡ ಬ್ಯಾಂಕಿನ ಜೊತೆ ಚೆನ್ನಾಗಿ ಇಟ್ಟಿಕೊಳ್ಳುವುದು ಮತ್ತು ಹಣದ ಬಗ್ಗೆ ತುಂಬಾ ಜಾಗೃತವಾಗಿ ಬಳಕೆ ಮಾಡುವುದುರ ಬಗ್ಗೆ ತುಂಬಾ ಸರಳ ರೀತಿಯಲ್ಲಿ ತಿಳಿಯುವಂತೆ ಈ ತರಬೇತಿಯಲ್ಲಿ ತಿಳಿಸಿಕೊಟ್ಟಿದ್ದರು. ಸರಿಯಾಗಿ 12:30 ನಿಮಿಷಕ್ಕೆ ಧನ್ಯವಾದಗಳೊಂದಿಗೆ ಈ ಸಭೆಯನ್ನ ಮುಕ್ತಾಯ ಮಾಡಲಾಯಿತು.

## “ಮಕ್ಕಳ ದಿನಾಚರಣೆಕಾರ್ಯಕ್ರಮ” “ಸುಭಾಷ್ ಚಂದ್ರ ಬೋಸ್‌ಅವರ ಜೀವನ ಚರಿತ್ರೆ”



22 ನವಂಬರ್ 2025ರಂದು ಚಿಟುಗುಪ್ಪ ತಾಲೂಕಿ ಮುದನಾಳ ಗ್ರಾಮದಲ್ಲಿ ಶ್ರೀಮತಿ ರೀಟಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು, ಸ್ವಸಹಾಯ ಸಂಘದ ಮಹಿಳೆಯರ ಮಕ್ಕಳಿಗೆ ಒಟ್ಟು ಸೇರಿಸಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಮಕ್ಕಳು ಈ ದೇಶದ ಆಸ್ತಿಗಳು ಒಳ್ಳೆಯ ಶಿಕ್ಷಣವನ್ನು ಕಲಿತು ದೊಡ್ಡ ವ್ಯಕ್ತಿಯಾಗಬೇಕೆಂದು. ಸುಭಾಷ್ ಚಂದ್ರಬೋಸ್ ಅವರ ಜೀವನ ಚರಿತ್ರೆಯೊಂದಿಗೆ ಅವರಿಗೆ ಮನಮುಟ್ಟುವಂತೆ ತಿಳಿಸಲಾಯಿತು. ಆಟೋಟಗಳ ಸ್ಪರ್ಧೆಗಳನ್ನು ಆಡಿಸಿ ಗೆದ್ದವರಿಗೆ ಬಹುಮಾನವನ್ನು ವಿತರಿಸಲಾಯಿತು. ಹಾಗೆ ಸಿಹಿ ತಿಂಡಿಯನ್ನು ಕೊಡಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಸಂಘದ ಮಹಿಳೆಯರು ಭಾಗವಹಿಸಿ ಸಂತೋಷದಲ್ಲಿ ವ್ಯಕ್ತಪಡಿಸಿದರು.

## “ಗ್ರಾಮ ಪಂಚಾಯತ್ ಭೇಟಿ ಹೊಸ ಅಂಗನವಾಡಿ ನಿರ್ಮಾಣ”




21 ನವೆಂಬರ್2025ರಂದು ಭಾಗ್ಯನಗರ್ ಗ್ರಾಮದಲ್ಲಿ ಕಳೆದ ಒಂದು ವರ್ಷದಿಂದ ಅಂಗನವಾಡಿ ಭಾವಣಿ ತುಂಬಾ ಹಾಳಾದ ಕಾರಣ ಮಳೆಗಾಲದಲ್ಲಿ ಅಂಗನವಾಡಿಯಲ್ಲಿ ನೀರು ಬರುತ್ತಿತ್ತು, ಅಂಗನವಾಡಿ ಗೋಡೆಗಳನ್ನು ಸೀಳಿ ಬಿರುಕು ಬಿಟ್ಟಿದ್ದವು. ಆ ಕಾರಣಕ್ಕೆ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರೊಂದಿಗೆ ಅಂಗನವಾಡಿ ಕಾರ್ಯಕರ್ತರ ಜೊತೆಗೂಡಿ ಗ್ರಾಮ ಪಂಚಾಯತ್ ಅಧ್ಯಕ್ಷರನ್ನು ಭೇಟಿ ಮಾಡಿ ಅಂಗನವಾಡಿ ದುರಸ್ತಿಯ ಕುರಿತು ಮನವಿ ಪತ್ರ ನೀಡಲಾಯಿತು. ತದನಂತರ ಅಂಗನವಾಡಿ ಸರಿಪಡಿಸಿಕೊಟ್ಟರು. ಆದರೂ ಕೂಡ ಪದೇಪದೇ ಹಾಳಾಗುತ್ತಿರುವ ಕಾರಣಕ್ಕೆ ಗ್ರಾಮ ಪಂಚಾಯತ್ ಅಧ್ಯಕ್ಷರೊಂದಿಗೆ ಮತ್ತೆ ಭೇಟಿಮಾಡಿ ಪದೇಪದೇ ಅಂಗನವಾಡಿ ಹಾಳಾಗುತ್ತಿದೆ. ನಮಗೆ ಹೊಸ ಅಂಗನವಾಡಿ ನಿರ್ಮಾಣ ಮಾಡಿಕೊಡಬೇಕೆಂದು ಅರ್ಜಿ ಸಲ್ಲಿಸಿದರು. ಒಂದು ವರ್ಷದ ನಂತರ ಹೊಸ ಅಂಗನವಾಡಿ ನಿರ್ಮಾಣ ಮಾಡಿಕೊಟ್ಟಿದ್ದಾರೆ. ಅಂಗನವಾಡಿ ಹತ್ತಿರ ಬಾವಿಇದೆ ಆ ಬಾವಿಯ ಹತ್ತಿರ ಮಕ್ಕಳು ಓಡಾಡುವ ಕಾರಣಕ್ಕೆ ಮತ್ತೆ ಗ್ರಾಮ ಪಂಚಾಯತ್ ಭೇಟಿ ಮಾಡಿ ಬಾವಿಗೆ ಜಾಲಿ ಹಾಕಿ ಕೂಡಿಸುವುದರ ಕುರಿತು ಮಾಹಿತಿ ನೀಡಿದ್ದೇವೆ. ಜಾಲಿಯು ಕೂಡ ಹಾಕಿಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಅಂಗನವಾಡಿ ಕಾರ್ಯಕರ್ತರ ತಮ್ಮ ಅನಿಸಿಕೆ ವ್ಯಕ್ತಪಡಿಸಿ ನಮಗೆ ಅಂಗನವಾಡಿಯಲ್ಲಿ ಕೂತುಕೊಳ್ಳಲು ತುಂಬಾ ಕಷ್ಟಕರವಾಗಿತ್ತು ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರೊಂದಿಗೆ ಜಾಲಬಂದ ಬೆಳೆಸಿಕೊಂಡು ಪದೇಪದೇ ಗ್ರಾಮ ಪಂಚಾಯತ್ ಭೇಟಿ ಮಾಡಿ ಅಂಗನವಾಡಿ ನಿರ್ಮಾಣ ಮಾಡಿ ಕೊಂಡಿದ್ದೇವೆ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.

## “ಮಕ್ಕಳ ದಿನಾಚರಣೆ” “ಪಂಡಿತ ಜವಾಹರ್ಲಾಲ್ ನೆಹರು ರವರ ಸವಿನೆನಪು”



29 ನವಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ಸೀತಾಳಗೇರಾ ಗ್ರಾಮದಲ್ಲಿ ಸಂಘ ಮಹಾಸಂಘದ ಸಮುದಾಯದ ಜನರಿಗೆ ಶ್ರೀಮತಿ ಅಮಿತಾ ರವರು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದರು. ಫಾದರ್ ಜಾರ್ಜ್ ತಾಳಮಡಗಿ ಕೇಂದ್ರದನಿರ್ದೇಶಕರು ಮಕ್ಕಳ ದಿನಾಚರಣೆಯ ಕುರಿತು ಮಾತನಾಡುತ್ತಾ, ಭಾರತ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರ್ಲಾಲ್ ನೆಹರು ಅವರ ಹುಟ್ಟಿದ ದಿವಸದ ಪ್ರಯುಕ್ತವಾಗಿ ದೇಶದಾದಂತ ಎಲ್ಲಾ ಮಕ್ಕಳಿಗೂ ಕೂಡ ನವೆಂಬರ್ 14ರಂದು ಅವರ ಹುಟ್ಟುಹಬ್ಬದ ಸವಿನೆನಪಿಗಾಗಿ ಮಕ್ಕಳ ದಿನಾಚರಣೆ ಮಾಡಲು ಕರೆಯನ್ನು ನೀಡಿದರು. ಮಕ್ಕಳ ಮನಸ್ಸು ಮುಗ್ಧತೆಯಿಂದ ಇರುವುದರಿಂದ ಪಂಡಿತ್ ಜವಾಲಾಲ್ ನೆಹರು ಮಕ್ಕಳ ಮನಸ್ಸುಗುಲಾಬಿ ಇರುತ್ತದೆಯೆಂದು ತಿಳಿಸಿದರು. ಮಕ್ಕಳಿಗೆ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿ ಕೇಕ್ ಕತ್ತರಿಸಿ ಬಹುಮಾನ ವಿತರಣೆ ಮಾಡುವ ಮೂಲಕ ಮಕ್ಕಳ ದಿನಾಚರಣೆ ಆಚರಣೆ ಮಾಡಿದರು ಒಟ್ಟು 34 ಜನರು ಭಾಗವಹಿಸಿದರು.

## “ಲಿಂಗ ಸಮಾನತೆ ಮತ್ತು ನ್ಯಾಯ ವಿಷಯದ ಕುರಿತು ತರಬೇತಿ”



24 ನವೆಂಬರ್ 2025ರಂದು ಭಾಲ್ಕಿ ಪಟಣದ ಸರಕಾರಿ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಮಹಿಳಾ ಸಬಲೀಕರಣ ಯೋಜನೆಯ ಸಂಯುಕ್ತ ಆಶ್ರಯದಲ್ಲಿ ಮಕ್ಕಳಿಗೆ ಲಿಂಗ ಸಮಾನತೆ ಮತ್ತು ನ್ಯಾಯ ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ ಕಿರಣ ಮಹಾಸಂಗದ ಪದಾಧಿಕಾರಿ ಶ್ರೀಮತಿ. ಇಂದುಮತಿ ಮತ್ತು ಮಹಿಳಾ ಸಬಲೀಕರಣ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ನಿರ್ಮಲರವರು ಲಿಂಗ ಸಮಾನತೆ ಮತ್ತು ಲಿಂಗತ್ವದ ಕುರಿತು ಬದಲಾವಣೆ ಹೇಗೆ ತರಬೇಕೆಂದು ವಿವರಿಸಿದರು.ಮೊದಲು ನಮ್ಮ ಕುಟುಂಬದಲ್ಲಿ ಬದಲಾವಣೆ ಮಾಡಿ, ತದನಂತರ



ಸಮಾಜಗಳಲ್ಲಿ ಬದಲಾವಣೆ ಮಾಡಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ರವಿಕುಮಾರ್ ಆಪ್ತ ಸಮಾಲೋಚಕರು ಮತ್ತು ಕಾರ್ಯಕ್ರಮದ ಕಾರ್ಯಕರ್ತೆಯಾಗಿರುವ ಶ್ರೀಮತಿ ಸುಜಾತರವರು ಸಭೆ ಆಯೋಜಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 87 ಪ್ರೌಢ ಶಾಲೆ ಮಕ್ಕಳು ಮತ್ತು 15 ಶಿಕ್ಷಕರು ಭಾಗವಹಿಸಿ ಲಿಂಗ ಸಮಾನತೆ ಬಗ್ಗೆ ಅರಿವು ತಿಳಿದುಕೊಂಡರು.

## “ಲಿಂಗ ಸಮಾನತೆ ಕುರಿತು ಮಕ್ಕಳಿಗೆ ಹಾಗೂ ಪೋಷಕರಿಗೆ ತರಬೇತಿ”



14 ನವಂಬರ್ 2025ರಂದು ಗುಮ್ಮ ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು ಹಾಗೂ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳಾದ ಶ್ರೀಮತಿ ಶಾಲುನಿ ಮೇಡಂ ಅವರು ಮಕ್ಕಳ ದಿನಾಚರಣೆ ಯಾಕೆ ಆಚರಿಸುತ್ತೇವೆ ಎಂಬುದರ ಬಗ್ಗೆ ಮಾತನಾಡಿದರು ಹಾಗೂ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ರೋಸ್ಮರಿ ಅವರು ಲಿಂಗ ಸಮಾನತೆ ಕುರಿತು ಮಕ್ಕಳಿಗೆ ಹಾಗೂ ಪೋಷಕರಿಗೆ ತರಬೇತಿಯನ್ನು ನೀಡಿದರು. ತರಬೇತಿಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಮಾನವಾದ ಶಿಕ್ಷಣವನ್ನು ಕೊಡಬೇಕು ಹಾಗೂ ತರತಮೆ ಮಾಡಬಾರದು ಎಂಬ ಅದರ ಬಗ್ಗೆ ತರಬೇತಿ ನೀಡಿದರು.

## “ಮಕ್ಕಳ ದಿನಾಚರಣೆಯ ಕಾರ್ಯಕ್ರಮ”



17 ನವಂಬರ್ 2025ರಂದು ಔರಾದ್ ತಾಲ್ಲೂಕಿನ ನಾಗೂರ (ಎಂ) ಗ್ರಾಮದಲ್ಲಿ ಮಕ್ಕಳ ಕ್ಲಬ್‌ನಲ್ಲಿ ಮಕ್ಕಳ ದಿನಾಚರಣೆ ಅರ್ಥಪೂರ್ಣವಾಗಿ ಮತ್ತು ಸಂತೋಷಭರಿತವಾಗಿ ನೆರವೇರಿತು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಸಿಸ್ಟರ್ ಇಗ್ನಶಿಯಾ ಸಾಂತ್‌ಪುರ ವರನ್ನು ಆಹ್ವಾನಿಸಲಾಗಿತ್ತು. ಒಟ್ಟು 45 ಮಂದಿ ಮಕ್ಕಳು ಉತ್ಸಾಹಭರಿತವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಿ, ನಂತರ ಮಕ್ಕಳಿಗೆ ಉತ್ಸಾಹ ತುಂಬುವ ಮಕ್ಕಳ ದಿನದ ಸಂದೇಶವನ್ನು ಸಂಪನ್ಮೂಲ ವ್ಯಕ್ತಿ ನೀಡಿದರು. ತಮ್ಮ ಸಂದೇಶದಲ್ಲಿ ಅವರು ಪ್ರತಿ ಮಗು ದೇವರ ಅಮೂಲ್ಯ ವರ, ಅವರಲ್ಲಿ ಅಡಗಿರುವ ಪ್ರತಿಭೆಯನ್ನು ಬೆಳೆಸುವುದು ನಮ್ಮ ಕರ್ತವ್ಯ, ಶಿಕ್ಷಣ, ಶಿಸ್ತು ಮತ್ತು ಸನ್ಮಾರ್ಗದಲ್ಲಿ ನಡೆಯುವ ಜೀವನವೇ ಬೆಳಕಿನ ಭವಿಷ್ಯಕ್ಕೆ ದಾರಿ. ದೊಡ್ಡ ಕನಸುಗಳನ್ನು ಕಾಣಲು ಹೆದರಬಾರದು; ಪರಿಶ್ರಮ ಮತ್ತು ಆತ್ಮವಿಶ್ವಾಸ ಇದ್ದರೆ ಏನನ್ನೂ ಸಾಧಿಸಬಹುದು ಎಂದು ಪ್ರೇರಣಾದಾಯಕವಾಗಿ ಮನದಟ್ಟು ಮಾಡಿಕೊಟ್ಟರು. ಮಕ್ಕಳಲ್ಲಿ ಆತ್ಮವಿಶ್ವಾಸ, ಗುರಿನಿರದೇಶ ಮತ್ತು ಮೌಲ್ಯಬದ್ಧ ಜೀವನದ ಕುರಿತು ಅವರು ನೀಡಿದ ಮಾತುಗಳು ಮಕ್ಕಳನ್ನು ಹೊಸ ಚೈತನ್ಯದಿಂದ ತುಂಬಿಸಿದವು. ಕಾರ್ಯಕ್ರಮದ ಎರಡನೇ ಭಾಗವಾಗಿ ಮಕ್ಕಳು ಆನಂದಿಸಲು ವಿವಿಧ ಆಟಗಳು ಹಮ್ಮಿಕೊಳ್ಳಲಾಯಿತು. ಎಲ್ಲಾ ಮಕ್ಕಳು ಸಕ್ರಿಯವಾಗಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿದರು. ಜಯಶಾಲಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲ ಮಕ್ಕಳಿಗೂ ಉಪಹಾರ ವಿತರಿಸಲಾಯಿತು. ಮಕ್ಕಳು ಸಂತೋಷದಿಂದ ಭಾಗವಹಿಸಿ, ನಗುಮುಖಗಳಿಂದ ಕಾರ್ಯಕ್ರಮವನ್ನು ಸಮೃದ್ಧಗೊಳಿಸಿದರು. ಒಟ್ಟಾರೆ, ಮಕ್ಕಳ ದಿನಾಚರಣೆ ಮಕ್ಕಳಲ್ಲಿ ಒಗ್ಗಟ್ಟು, ಆತ್ಮವಿಶ್ವಾಸ, ಸಂತೋಷ ಮತ್ತು ಬೆಳೆವ ಮನೋಭಾವವನ್ನು ಬೆಳಗಿಸಿದ ಅರ್ಥಪೂರ್ಣ ಮತ್ತು ಹೃದಯಸ್ಪರ್ಶಿ ಕಾರ್ಯಕ್ರಮವಾಯಿತು.

## “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ಮದರ್ ಚಾಂಪಿಯನ್ ಗ್ರೂಪ್ ರಚನೆ”



27 ನವೆಂಬರ್ 2025ರಂದು ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ಚಾಂಪಿಯನ್ ಗ್ರೂಪ್ ರಚನೆ ಮಾಡಲಾಯಿತು. 0–5 ವರ್ಷದಲ್ಲಿ ಮಕ್ಕಳ ಮೆದುಳಿನ ವೇಗದ ಬೆಳವಣಿಗೆ ಅತ್ಯಂತ ಪರಿಣಾಮಕಾರಿಯಾಗಿ ಬೆಳವಣಿಗೆಯನ್ನು ಹೊಂದುತ್ತದೆ. ಆರಂಭಿಕವಾಗಿ ಮಕ್ಕಳಿಗೆ ಸಹಾಯ ಮಾಡುವುದರಿಂದ ಜೀವನಪೂರ್ತಿ ಕಲಿಕೆಗೆ ದಾರಿಯನ್ನ ಮಾಡಿಕೊಡುತ್ತದೆ. ಜೊತೆಗೆ ಮಕ್ಕಳ ಬೆಳವಣಿಗೆ ಸಮುದಾಯದ ಪಾತ್ರವೂ ಕೂಡ ಅತ್ಯಂತ ಮಹತ್ವದ ಆಗಿರುತ್ತದೆ. ಮಕ್ಕಳ ಸಮಸ್ಯೆಗಳನ್ನು ಬೇಗ ಗಮನಿಸಿದರೆ ದೊಡ್ಡ ಸಮಸ್ಯೆಗಳನ್ನು ತಪ್ಪಿಸಬಹುದು. ಮಕ್ಕಳಿಗೆ ತಾಯಂದಿರೇ ಉತ್ತಮ ವೀಕ್ಷಕರಾಗಿರುತ್ತಾರೆ. ಕುಟುಂಬ ಮತ್ತು ಆರೋಗ್ಯ ಸಿಬ್ಬಂದಿಗೆ ಸ್ಪಷ್ಟವಾಗಿ ಮಕ್ಕಳ ಮಾಹಿತಿಯನ್ನು ಹೇಳುವುದು. ತಾಯಿಯರು ದಿನನಿತ್ಯ ಮಕ್ಕಳ ಚಟುವಟಿಕೆ ಗಮನಿಸಬೇಕು ಮನೆಯಲ್ಲಿಯೇ ಕಲಿಕೆಗೆ ಹೆಚ್ಚಿನ ಅವಕಾಶಗಳು ಇರುತ್ತವೆ. ನಿಮ್ಮ ಮಗುವಿಗೆ ಕಲಿಯಲು ನೀವು ಮಾಡಿದ ಸರಳ ಸಹಾಯವೂ ಕೂಡ ಗುಂಪಿನಲ್ಲಿ ಚರ್ಚೆ ಮಾಡಬೇಕು. ಮಿದುಳಿನ ಸಂಶೋಧನೆ ಪ್ರಕಾರ 0–5 ವರ್ಷ ಪ್ರಮುಖ ಹಂತ. ತಾಯಿಯ ಪ್ರಮುಖವಾಗಿರುವಂತಹ ಪಾತ್ರ ಏನೆಂದರೆ ಶಿಕ್ಷಕಿಯಾಗಿ, ಆರೈಕೆಗಾರ್ತಿಯಾಗಿ, ಮನುಧ್ಯಾನ ಬೆಂಬಲ ನೀಡುವವಳಾಗಿ ತಾಯಂದಿರು ಕೆಲಸವನ್ನು ನಿರ್ವಹಿಸಬೇಕಾಗಿದೆ ಎಂದು ಮಾಹಿತಿಯನ್ನು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಸೂರ್ಯಕಾಂತ್ ರವರು ಮಾಹಿತಿ ನೀಡಿದರು.



## “ಬೆಳವಣಿಗೆಯಿಂದ ಕುಂಠಿತ ಮಕ್ಕಳಿಗೆ ಉಪಕೇಂದ್ರದಲ್ಲಿ ಚಟುವಟಿಕೆ”



21 ನವೆಂಬರ್ 2025ರಂದು ಹುಮನಾಬಾದ್ ತಾಲೂಕಿನ ವಾಂಜ್ರಿ ಕಾಲೋನಿಯಲ್ಲಿ ಎಪಿಡಿಇಂದ ಶ್ರೀ ಶ್ರೀನಾಥ್ ಸರ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದರು. ಹಾಗೂ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ಆಲ್ಬರ್ಟ್ ರವರು ಭಾಗವಹಿಸಿ ಕಾರ್ಯಕ್ಷೇತ್ರದ ಭೇಟಿ ನೀಡಲು ಉಪ ಕೇಂದ್ರಗಳಿಗೆ ಹೋಗಲಾಯಿತು. ಬೆಳವಣಿಗೆಯಿಂದ ಕುಂಠಿತ ಹೊಂದಿದ ಮಕ್ಕಳಿಗೆ ಉಪಕೇಂದ್ರದಲ್ಲಿ ಮಕ್ಕಳಿಗೆ ಚಟುವಟಿಕೆ ಮಾಡಲು ಕಾರ್ಯಕರ್ತೆ ಶ್ರೀಮತಿ ಅಂಬಿಕಾ ರವರ ಸಹಾಯ ಪಡೆದುಕೊಂಡು ಮಕ್ಕಳಿಗೆ ಬಣ್ಣ ಬಣ್ಣದ ವಸ್ತುಗಳನ್ನು ಜೋಡಿಸುವ ಮುಖಾಂತರ ಹಾಗೂ ಅಕ್ಷರಗಳನ್ನು ಗುರುತಿಸುವುದು, ಚಿತ್ರವನ್ನು ಬಿಡಿಸುವಂತಹದು, ಬೆಳಗ್ಗೆ ಸಮಯದಲ್ಲಿ ಏನೆಲ್ಲ ಕೆಲಸ ಕಾರ್ಯಗಳು ತನ್ನಾಗಿ ತಾವೇ ಮಾಡಿಕೊಳ್ಳಬೇಕು ಎನ್ನುವುದನ್ನು ಮಗುವಿಗೆ ಚಟುವಟಿಕೆಗಳ ಮುಖಾಂತರ ಹೇಳಿಕೊಡಲಾಯಿತು. ಚಟುವಟಿಕೆಯಿಂದ ಮಗು ಬದಲಾವಣೆ ಹೊಂದಿದ್ದಾಳೆ ಎಂದು ಶ್ರೀ ಶ್ರೀನಾಥ ಸರ್ ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಲೆವೆಲ್ 2ರಲ್ಲಿ ಮಗುವಿಗೆ ಚಟುವಟಿಕೆ ಮಾಡಿಸುವುದಾಗಿ ತಿಳಿಸಿದ್ದಾರೆ. ಅಂಗನವಾಡಿ ಕಾರ್ಯಕರ್ತರು ಇವಾಗ ಮಗು ಬದಲಾವಣೆ ಹೊಂದುವುದಕ್ಕೆ ಆರ್ಬಿಟ್ ಸಂಸ್ಥೆ ಕಾರ್ಯಕರ್ತರು ಶ್ರಮ ಪಟ್ಟಿದ್ದಾರೆಂದು ತಿಳಿಸಿದ್ದಾರೆ. ಇದನ್ನು ಕಂಡು ಎಪಿಡಿ ಯವರು ಒಳ್ಳೆಯ ರೀತಿಯಿಂದ ಕೆಲಸ ಮಾಡುತ್ತಾ ಇದ್ದೀರಾ ಎಂದು ತಿಳಿಸಿದ್ದಾರೆ

## “ಬೆಳವಣಿಗೆಯಿಂದ ಕುಂಠಿತ ಮಗುವಿಗೆ ಚಟುವಟಿಕೆಯಿಂದ ಸುಧಾರಣೆ”



ಹೆಸರು ಒ.ಆ. ಶಹೀಲ್ ಜನ್ಮ ದಿನಾಂಕ 6 ಜನೇವರಿ 2023 ನೊಂದಣಿ ಸಂಖ್ಯೆ–252600002 ಲಿಂಗ–ಗಂಡು, ತಂದೆ ಹೆಸರು ಮಸ್ತಾನ್, ತಾಯಿ ಹೆಸರು ಮಾಲನ. ಕುಟುಂಬ ವಿಭಕ್ತ ವೈಕುಲ್ಯದ ಲೋಕೊಮೋಟರ್ ವಿಳಾಸ ಹಳ್ಳಿಖೇಡ (ಬಿ) ತಾಲೂಕ ಹುಮ್ನಾಬಾದ್ ಜಿಲ್ಲೆ ಬೀದರ್. ಗುರುತಿಸಿದ ದಿನಾಂಕ 15 ಏಪ್ರಿಲ್ 2025 ಕುಟುಂಬದ ಹಿನ್ನೆಲೆ:– ತಂದೆ ಕೂಲಿ ಕೆಲಸವನ್ನು ಮಾಡುತ್ತಾರೆ, ತಾಯಿ ಸಹಕೋಲಿ ಕೆಲಸವನ್ನು ಮಾಡುತ್ತಾರೆ. ಕುಟುಂಬದಲ್ಲಿ ಒಟ್ಟು ಐದು ಜನ ಸದಸ್ಯರಿದ್ದಾರೆ. ಮಗು ಹುಟ್ಟಿದಾಗ ಹತ್ತಿರಲಿಲ್ಲ ಕಾಮಲೆ ರೋಗಕ್ಕೆ ತುತ್ತಾಗಿತ್ತು. ವೈಕುಲವನ್ನು ಗುರುತಿಸುವ ವಿಧಾನ:– ಮಾತನಾಡಿಸುವುದರ ಮುಖಾಂತರ ಗುರುತಿಸಿದು. ಲಕ್ಷಣಗಳು ಕೂತುಕೊಳ್ಳದೇ ಇರುವುದು, ಮಾತನಾಡದೆ ಇರುವುದು, ಸನ್ನೆಗಳ ಮುಖಾಂತರ ವರ್ತನೆ, ಮಕ್ಕಳ ಜೊತೆ ಬೆರೆಯದೆ ಇರುವುದು. ವೈದ್ಯಕೀಯ ಹಸ್ತಕ್ಷೇಪ–ಫುಡ್ ಮಾತ್ರೆಗಳನ್ನು ವಿತರಿಸಲಾಗಿತ್ತು. ಸಾಮಾಜಿಕ ಭದ್ರತಾ ಸಹಾಯ– ಆಧಾರ್ ಕಾರ್ಡ್ ಅರ್ಜಿ ಸಲ್ಲಿಕೆ ಪೋಷಕರ ಸಲಹೆಮತ್ತು ಮಾರ್ಗದರ್ಶನ– ಅಂಗನವಾಡಿಯಲ್ಲಿ ಮಗುವೇ ತಿಂಗಳಿಗೆ ಒಂದು ಬಾರಿ ತೂಕ ಮಾಡಿಸುವುದು ಮೌಲ್ಯಮಾಪನದ ಪ್ರಕಾರ ಚಟುವಟಿಕೆ ಮಾಡಿಸಲಾಯಿತು. ಹಸ್ತಕ್ಷೇಪ ಮತ್ತು ಚಟುವಟಿಕೆಗಳು ದಿಬ್ಬಿನ ಸಹಾಯದಿಂದ ಕುಳಿತುಕೊಳ್ಳುವ ಚಟುವಟಿಕೆ, ಬಲೂನ್ ಓದಿಸಿ ಚಟುವಟಿಕೆ, ಗೋಡೆಯ ಸಹಾಯದಿಂದ ನಡೆಸುವ ಚಟುವಟಿಕೆ ಮಾಡಿಸಲಾಯಿತು. ದಿನನಿತ್ಯ ಚಟುವಟಿಕೆ ಬಗ್ಗೆ ಹೇಳಿಕೊಡಲಾಯಿತು. ಪೋಷಕರ ಮತ್ತು ಕುಟುಂಬ ಭಾಗವಹಿಸುವಿಕೆ– ಚುರುಕಾಗಿದ್ದಾರೆ.ಮಗು ಇವಾಗ ಕುಳಿತುಕೊಳ್ಳುತ್ತಿದ್ದಾನೆ. ಎದ್ದು ನಿಲ್ಲುತ್ತಿದ್ದಾನೆ. ನಡೆಯುತ್ತಿದ್ದಾನೆ. ಸಪೂರ್ಣದಿಂದ ಮಕ್ಕಳ ಜೊತೆ ಬೆರೆತು ಆಟ ಆಡುತ್ತಿದ್ದಾನೆ. ಇದನ್ನು ಕಂಡು ಪೋಷಕರು ಸಂತೋಷ ವ್ಯಕ್ತಪಡಿಸಿದ್ದಾರೆ.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## “ವಿಕಲ ಚೇತನ ಮಗುವಿಗೆ ಚಟುವಟಿಕೆಗಳ ಮೂಲಕ ಸುಧಾರಣೆ”



ಮಗುವಿಗೆ ಕುಳಿತುಕೊಳಲು ಬರೋದಿಲ್ಲ ಹಾಗೂ ನಡೆಯೋದಕ್ಕು ಬರೋದಿಲ್ಲ ಮಾತು ಬರುವುದಿಲ್ಲ. ಈ ಕಾರಣದಿಂದ ಮಗುವಿನ ಬೆಳವಣಿಗೆಯಲ್ಲಿ ಮಗು ಕುಂಠಿತಗೊಂಡಿರುತ್ತದೆ. ಪ್ರಥಮವಾಗಿ ಮಗುವಿನ ಮನೆ ಭೇಟಿಮಾಡಿ ನಮ್ಮ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಮಾಹಿತಿ ನೀಡಲಾಯಿತು. ಬೆಳವಣಿಗೆಯ ಹಂತಗಳ ವಿಶ್ಲೇಷಣೆ ಮಾಡಲಾಯಿತು. ಮಗುವಿನ ಮನೆಗೆ ವಾರಕೊಮ್ಮೆ ಭೇಟಿನೀಡಿ ಚಟುವಟಿಕೆ ಮಾಡಿಸಲಾಯಿತು. ಚಟುವಟಿಕೆಗಳ ಮೂಲಕ ಕುಳಿತುಕೊಳ್ಳುವ ಚಟುವಟಿಕೆ ಹಾಗೂ Gross Motor & Speech therapy ಚಟುವಟಿಕೆ ಮಾಡಿಸಲಾತು. ಇದರ ಪರಿಣಾಮವಾಗಿ ಮಗುವಿಗೆ ಪ್ರಸುತ್ತು ಕುಳಿತುಕೊಳುತ್ತದೆ ಬೆಳವಣಿಗೆಯಾಗುತ್ತದೆ. ವಿಶೇಷವಾಗಿ ಮಗುವಿಗೆ ಪ್ರತಿದಿನ Oromoter and Support sitting activity ಮನೆಯಲ್ಲಿ ತಾಯಿಯವರು ಮಾಡಿಸುತ್ತಿದ್ದಾರೆ. ಈವಾಗ ಮಗು ಕುಳಿತುಕೊಳ್ಳುತ್ತಾಳೆ ನಡಿಯುತಾಳೆ ಇದನ್ನು ಕಂಡು ಪಾಲಕರು ತಮ್ಮ ಹರ್ಷವನ್ನು ವ್ಯಕ್ತಪಡಿಸುತ್ತಾರೆ. ಜೊತೆಗೆ ಸೇವಾ ಸಂಗಮ ಸಂಸ್ಥೆಗೆ ಧನ್ಯವಾದಗಳು ತಿಳಿಸಿದಾರೆ.

## "ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮ"



ನವೆಂಬರ್ 19 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಸಣ್ಣೂರ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿ ಕಶಿಕ್ಷಣ ಯೋಜನೆ ತರಬೇತಿಯ ಕುರಿತು 6 ಮತ್ತು 7 ತರಗತಿ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳು ಯಾವರೀತಿಯಾಗಿ ಇರುವರು ಎಂಬುದನ್ನು ತಿಳಿಸಿದರು. ಮಗು ಹುಟ್ಟಿದ ತಕ್ಷಣ ಅಳಬೇಕು ಇಲ್ಲವಾದರೆ ಮಗುವಿನ ಬೆಳವಣಿಗೆಯಲ್ಲಿ ಕುಂಟಿತಗೊಳ್ಳುವುದು. ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು. 9 ತಿಂಗಳಿಗೆ ಮಗು ಕುಳಿತುಕೊಳ್ಳಬೇಕು ಮತ್ತು ಅಂಬೆಗಾಲು ಹಾಕಬೇಕು. ಒಂದು ವರ್ಷದಲ್ಲಿ ಮಗು ಯಾರ ಸಹಾಯ ವಿಲ್ಲದೆ ನಡೆಯುವುದನ್ನು ಕಲಿಯಬೇಕು. ಎರಡು ವರ್ಷದಲ್ಲಿ ಮಗು ಸಂಪೂರ್ಣವಾಗಿ ಮನೆಯವರ ಹೆಸರುಗಳನ್ನು ಹೇಳಬೇಕು ಮತ್ತು ಮನೆಯ ವಾತಾವರಣಕ್ಕೆ ಮಗು ಹೊಂದಿಕೊಳ್ಳಬೇಕು. ಮೂರು ವರ್ಷಕ್ಕೆ ಮಗು ಅಂಗನವಾಡಿ ಕೇಂದ್ರಕ್ಕೆ ಹೋಗಬೇಕು ಎಲ್ಲ ಮಕ್ಕಳ ಜೊತೆ ಸಾಮಾಜಿಕವಾಗಿ ಹೊಂದಿಕೊಳ್ಳಬೇಕು. ಆರು ವರ್ಷದಲ್ಲಿ ಮಗು ಶಾಲೆಗೆ ಹೋಗಿ ಅಕ್ಷರಜ್ಞಾನ ಪಡೆದುಕೊಳ್ಳಬೇಕು. ಈ ಎಲ್ಲಾ ಮೇಲಿನ ಅಂಶಗಳು ಒಂದುವೇಳೆ ಮಗುವಿನಲ್ಲಿ ಕಂಡುಬಾರದೆ ಹೋದರೆ ಮಗುವಿನ ಬೆಳವಣಿಗೆ ಹಂತದಲ್ಲಿ ಕುಂಟಿತ ಗೊಂಡಿದೆ ಎಂದು ತಿಳಿದುಕೊಳ್ಳಬೇಕು. ಎಂದು ಸೇವಾ ಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿಯವರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 60 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## "ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕಶಿಕ್ಷಣದ ಜಾಗೃತಿ ಕಾರ್ಯಕ್ರಮ"

ನವಂಬರ್ 12 2025 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಮದೀನಾ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿ ಕಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತಹಂತವಾಗಿ ಕಡಿಮೆ ಮಾಡಬಹುದು ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆ ಎಂದು ಶ್ರೀಮತಿ ಶಿವಕಾಂತ ಅವರು ಮಾಹಿತಿತಿಳಿಸಿದರು 11 ಜನ ಮಹಿಳೆಯರು ಭಾಗವಹಿಸಿದರು.



## "ಸಂಘದ ಮಹಿಳೆಯರಿಗೆ ಮತ್ತು ನಾಗರಿಕರಿಗೆ ಕ್ಯಾನ್ಸರ್ ರೋಗದ ಕುರಿತು ಜಾಗೃತಿ"

ನವೆಂಬರ್ 18 2025ರಂದು ಕಲಬುರಗಿ ತಾಲ್ಲೂಕಿನಲ್ಲಿ ಬರುವ ಸಿರನೂರ ಗ್ರಾಮದಲ್ಲಿ ಸ್ವಸಹಾಯ ಸಂಘದ ಮಹಿಳೆಯರಿಗೆ ಹಾಗೂ ಗ್ರಾಮದ ಹಿರಿಯ ನಾಗರಿಕರಿಗೆ ಕ್ಯಾನ್ಸರ್ ರೋಗದ ಕುರಿತು ಅದರ ಲಕ್ಷಣಗಳ ಬಗ್ಗೆ ಈ ರೋಗಕಿರುವ ಚಿಕಿತ್ಸೆಗಳ ಕುರಿತು ಶ್ರೀ ರಾಜಕುಮಾರ್ ಕಾರ್ಯಕರ್ತರು ಸೇವಾ ಸಂಗಮ ಸಂಸ್ಥೆಅವರು ಮಾಹಿತಿಯನ್ನು ನೀಡುವ ಮೂಲಕ ಅವರಲ್ಲಿ ಅರಿವನ್ನು ಮೂಡಿಸಿದ್ದರು ಈ ಕಾರ್ಯಕ್ರಮದಲ್ಲಿ 10 ಜನರು ಭಾಗವಹಿಸಿದರು.



## "ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪಾಲಕರ ಸಭೆ"

ದಿನಾಂಕ 14 2025ರಂದು ಸೇವಾ ಸಂಗಮಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳಿಗೆ ಪಾಲಕರು ಮನೆಯಲ್ಲಿರುವ ವಸ್ತುಗಳನ್ನು ಉಪಯೋಗಿಸಿಕೊಂಡು ಯಾವರೀತಿಯಾಗಿ ಉತ್ತೇಜನ ಚಟುವಟಿಕೆ ಮಾಡಬೇಕು ಮಕ್ಕಳಲ್ಲಿ ಯಾವ ನ್ಯೂನ್ಯತೆಗೆ ಯಾವ ಚಟುವಟಿಕೆ ಮಾಡಬೇಕು ಎಂಬುದನ್ನು ಹಂತಹಂತವಾಗಿ ಪ್ರಾಯೋಗಿಕವಾಗಿ ಮಕ್ಕಳ ಪಾಲಕರಿಗೆ ಶ್ರೀಮತಿ ಶಿವಕಾಂತ ರವರು ತರಬೇತಿ ನೀಡಿದರು ಕುಮಾರಿ ಲಕ್ಷ್ಮಿಅವರು ಸರಕಾರದಿಂದ ಸಿಗುವ ವಿವಿಧ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು 80 ಜನ ಮಕ್ಕಳ ಪಾಲಕರು ಉಪಸ್ಥಿತರಿದ್ದರು.



## “ಪೌಷ್ಟಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮ”



15 ನವೆಂಬರ 2025ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮಜಿ ಫೌಂಡೇಶನ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಜಾಫ್ರಾಬಾದ್ ಗ್ರಾಮದಲ್ಲಿ ಪೌಷ್ಟಿಕ ಆಹಾರದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.ಈ ಕಾರ್ಯಕ್ರಮವನ್ನು ಉದ್ದೇಶಿಸಿ ಆರೋಗ್ಯವೇ ಭಾಗ್ಯ ಎನ್ನುವಂತೆ ಪೌಷ್ಟಿಕ ಆಹಾರವೆಂದರೆ ದೇಹಕ್ಕೆ ಅಗತ್ಯವಾದ ಎಲ್ಲಾ ಪೋಷಕಾಂಶಗಳನ್ನು ಒದಗಿಸುವ ಸಮತೋಲಿನ ಆಹಾರವಾಗಿದೆ. ಇದರಲ್ಲಿ ಹಣ್ಣುಗಳು, ತರಕಾರಿಗಳು, ಧಾನ್ಯಗಳು, ಮೀನು ಈ ಆಹಾರಗಳು ಜೀವಸತ್ವವನ್ನು ಹೊಂದಿದ್ದು ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಎಂದು ಲಕ್ಷ್ಮಿ ಅವರು 12 ಜನರಿಗೆ ತಿಳಿಸಿದರು.

## “ಸ್ಪರ್ಶ ಕ್ಯನ್ಸರ್ ಕಾರ್ಯಕ್ರಮ”



29 ನವೆಂಬರ್ 2025ರಂದು ಸೇವಾ ಸಂಗಮ ಸಂಸ್ಥೆ ವತಿಯಿಂದ ಇಂದಿರಾ ನಗರದಲ್ಲಿ ಸಂಜೆ ಕಲಿಕಾ ಕೇಂದ್ರದ ಮಕ್ಕಳಿಗೆ ಕ್ಯಾನ್ಸರ್ ಮಾಹಿತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಒಂದು ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಸ್ಪರ್ಶ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಂದಿನಿರವರು ಕ್ಯಾನ್ಸರ್ ಕುರಿತು ಮಕ್ಕಳಿಗೆ ಅರಿವು ಮೂಡಿಸಿದರು. ಮತ್ತು ಕ್ಯಾನ್ಸರ್ ರೋಗವನ್ನು ಹೇಗೆ ಬರುತ್ತದೆ ಮತ್ತು ಬಂದರೆ ಅದನ್ನು ಹೇಗೆ ತಡೆಗಟ್ಟಬೇಕು ಮತ್ತು ಯಾವ ಆಹಾರಗಳನ್ನು ಸೇವನೆ ಮಾಡಬೇಕು ಹಸಿರು ತರಕಾರಿಯನ್ನು ಸೇವನೆ ಮಾಡಬೇಕು ಸ್ವಚ್ಛತೆಯನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸಲಾಯಿತು. ಮತ್ತು ತಮ್ಮ ಮನೆಯಲ್ಲಿ ಯಾರಾದರೂ ಮದ್ಯಪಾನ ಮತ್ತು ಧೂಮಪಾನ ಸೇವನೆ ಮಾಡುತ್ತಿದ್ದರೆ ಅವರಿಗೆ ಹಂತಹಂತವಾಗಿ ಬಿಡಿಸುವಂತೆ ತಿಳಿಸಲಾಯಿತು ಈ ಒಂದು ಕಾರ್ಯಕ್ರಮದಲ್ಲಿ 60 ಮಕ್ಕಳು ಭಾಗವಹಿಸಿ ಕ್ಯಾನ್ಸರ್ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡರು.

## “ಸಮೃದ್ಧಿ ಕಾರ್ಯಕ್ರಮ ಯೋಜನೆ”



ಸೇವಾ ಸಂಗಮ ಸಂಸ್ಥೆ ವತಿಯಿಂದ ಸಮೃದ್ಧಿ ಕಾರ್ಯಕ್ರಮದ ಯೋಜನೆ ಅಡಿಯಲಿ 19 ನವೆಂಬರ್ 2025ರಂದು ಕಲ್ಬುರ್ಗಿ ತಾಲೂಕಿನಲ್ಲಿ ಬರುವ ಫರ್ತಬಾದ್, ಸನ್ನೂರ್ ಮತ್ತು ನಂದಿಕುರ ಗ್ರಾಮಗಳಿಗೆ ಸಮೃದ್ಧಿ ಕಾರ್ಯಕ್ರಮದ ಸಂಯೋಜಕರಾದ ಶ್ರೀಯುತ ಚಿನ್ನಪ್ಪ ಸರ್ ಕ್ರಾಸ್ ಸಂಸ್ಥೆ ಬೆಂಗಳೂರು ರವರು ಕ್ಷೇತ್ರಭೇಟಿ ಮಾಡಲಾಯಿತು. ಸಮೃದ್ಧಿ ಯೋಜನೆಯಲ್ಲಿ ಲೋನ ಪಡೆದುಕೊಂಡು ಸ್ವ ಉದ್ಯೋಗವನ್ನು ಮಾಡುತ್ತಿರುವ ಫಲಾನುಭವಿಗಳ ಮನೆಭೇಟಿ ಮಾಡಿದರು. ಲೋನ್ ಪಡೆದುಕೊಂಡು ಯಾವರೀತಿಯಲ್ಲಿ ಸ್ವ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ ಎಂಬುದನ್ನು ವೀಕ್ಷಿಸಲಾಯಿತು.

## “ಸಾಯಂಕಾಲ ಕಲಿಕಾ ಕೇಂದ್ರದಲ್ಲಿ ಮಕ್ಕಳ ದಿನಾಚರಣೆ”



ನವೆಂಬರ್ 14 2025ರಂದು ಸೇವಾ ಸಂಗಮ ಸಂಸ್ಥೆ ವತಿಯಿಂದ ಕಲ್ಬುರ್ಗಿ ನಗರದಲ್ಲಿ ಬರುವ ಸಂಜೀವನಗರ ಕಲಿಕಾ ಕೇಂದ್ರದಲ್ಲಿ ಮಕ್ಕಳ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಮಕ್ಕಳ ದಿನಾಚರ ಣೆಪ್ರಯುಕ್ತ ಮಕ್ಕಳಿಗೆ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು. ಮತ್ತು ಮನರಂಜನೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಯಿತು. ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಸೇವಾ ಸಂಗಮ ಸಂಸ್ಥೆಯ ಕಾರ್ಯಕ್ರಮಗಳ ವ್ಯವಸ್ಥಾಪಕರಾದ ಸಿಸ್ಟರ ವೀರಾ, ಸ್ಪರ್ಶ ಕಾರ್ಯಕ್ರಮದ ಸಂಯೋಜಕಿಯಾದ ಶ್ರೀಮತಿ ನಂದಿನಿ, ಕಲಿಕಾ ಕೇಂದ್ರದ ಶಿಕ್ಷಕಿಯಾದ ಕುಮಾರಿ ರಂಜಿತಾ ಮತ್ತು 40 ಮಕ್ಕಳು ಭಾಗವಹಿಸಿದರು.

## DONATE TO:

### For Indian Citizens Only

**For Indian Citizens Only**

Bank Name : HDFC
Bank A/c No : 50100649372471
Bank Branch : Humnabad
IFSC Code : HDFC0002411

### For Donation from Foreign Passport Holder only:

Account Holder Name:
Organizaion of Bidar Integral Transformation

Account No : 40158110346
Branch : New Delhi
IFSC Code : SBIN0000691
Swift code : SBINBB104

State bank of India, New Delhi
Donation to ORBIT are eligible for tax Excemption under 80G. Donors must provide full name, address, Contact and PAN Number to the Organization.

## You Can Support

- Rehabilitation of People with mental illness.
- Nutrition support to children with delay in development
- Livelihood /IGP Training for men, women and youth.
- Reconstuctive surgery for individuals with disabilities
- Aids & Appliances for the Diffrently abled.
- Skill training for youth, disabled and people with mental illness
- Health Camps & treatments
- Blood donation camp
- Eye & Organ donation camps
- Walkthon for HIV/AIDS awareness and support for individuals with disabilities
- Corpus fund for the Organization.
- Greening the Future by Planting the Saplings on every Environment Day

## "ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"

### ಲಿಂಗ ಸಮಾನತೆಗೆ ಕಾರ್ಯಗಾರ ಅಗತ್ಯ



• ದಿ ಡೈಲಿ ನ್ಯೂಸ್ ಹುಮನಾಬಾದ್

ಲಿಂಗ ಸಮಾನತೆ ಹೋಗಲಾಡಿಸಲು ತರಬೇತಿ ಕಾರ್ಯಾಗಾರಗಳು ಬಹಳ ಅಗತ್ಯವಾಗಿವೆ ಎಂದು ಬಳ್ಳಾರಿ ಬಿಡಿಡಿಎಸ್ ಸಂಸ್ಥೆಯ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕ ಅರಳಪ್ಪ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಲಿಂಗ ಸಮಾನತೆ ಪ್ರೇರಕ ತಂಡದ ಸದಸ್ಯರಿಗಾಗಿ ಹಮ್ಮಿಕೊಂಡಿದ್ದ ಒಂದು ದಿನದ ತರಬೇತಿ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದರು.ಸತತ ಪ್ರಯತ್ನ ಮತ್ತು ಒಗ್ಗಟ್ಟಿನ ಹೋರಾಟದ ಮೂಲಕ ಸಮಾಜದಲ್ಲಿ ಲಿಂಗ ಸಮಾನತೆ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್,ಕಳೆದ ಅನೇಕ ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಮಹಿಳಾ ಸಬಲೀಕರಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದೆ.ಮಹಿಳೆಯರು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ತಮ್ಮ ಹಕ್ಕುಗಳಿಗಾಗಿ ಹೋರಾಡುವ ವಾತಾವರಣ ರೂಪುಗೊಳ್ಳಬೇಕಾಗಿದೆ.ಸಬಲೀಕರಣ ಎಂದರೆ ಕೇವಲ ಆರ್ಥಿಕ ಸ್ವಾವಲಂಬನೆ ಅಲ್ಲ, ಮಹಿಳೆಯರ ಸರ್ವತೋಮುಖ ಬೆಳವಣಿಗೆ ಎಂದು ಹೇಳಿದರು.ಈ ಸಂದರ್ಭದಲ್ಲಿ ಮಹಿಳಾ ಸಬಲೀಕರಣ ಯೋಜನೆ ಸಂಯೋಜಕ ನಿರ್ಮಲ, ಸವಿತಾ, ಸೂರ್ಯಕಾಂತ್, ರಿಟಾ, ಇಂದುಮತಿ ಸೇರಿ ಅನೇಕರು ಇದ್ದರು.ಕೊನೆಯಲ್ಲಿ ಶಿಬಿರಾರ್ಥಿಗಳಿಗೆ ಸಂವಿಧಾನದ ಪೀಠಿಕೆಯನ್ನು ಓದಿಸಿದರು.

### 'ಶಿಕ್ಷಣದಿಂದ ಸಮಾನತೆ ಸಾಧ್ಯ'

ಪ್ರಜಾವಾಣಿ ವಾರ್ತೆ

ಹುಮನಾಬಾದ್: 'ಮಹಿಳೆಯರ ಸಬಲೀಕರಣಕ್ಕೆ ಉನ್ನತ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತಿದ್ದು, ಲಿಂಗ ಸಮಾನತೆ ಅಭಿವೃದ್ಧಿಗೂ ಪೂರಕವಾಗಿದೆ' ಎಂದು ಆರ್ಬಿಟ್ ಸಂಸ್ಥೆ ಕಾರ್ಯದರ್ಶಿ ಫಾದರ್ ವಿಕ್ಟರ್ ವಾಸ್ ಹೇಳಿದರು.

ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ನಡೆದ ಲಿಂಗ ಸಮಾನತೆ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಉನ್ನತ ಶಿಕ್ಷಣ ಪಡೆಯುವುದರಿಂದ ಮಹಿಳೆಯರು ಸ್ವಾಭಿಮಾನದಿಂದ ಸ್ವತಂತ್ರವಾಗಿ ಬದುಕುವ ಸಾಮರ್ಥ್ಯ ಬೆಳೆಸಿಕೊಳ್ಳಬಹುದಾಗಿದೆ. ಆ ಮೂಲಕ ಸಮಾಜದಲ್ಲಿ ಅವರ ಸ್ಥಾನಮಾನವೂ ಹೆಚ್ಚುತ್ತದೆ' ಎಂದರು.

ಅರಳಪ್ಪ, ನಿರ್ಮಲಾ, ಸವಿತಾ, ಸೂರ್ಯಕಾಂತ, ಇಂದುಮತಿ ಉಪಸ್ಥಿತರಿದ್ದರು.



ಹುಮನಾಬಾದ್ ಪಟ್ಟಣದ ಹೊರವಲಯದ ಆರ್ಬಿಟ್ ಸಂಸ್ಥೆಯಲ್ಲಿ ಲಿಂಗ ಸಮಾನತೆ ಕಾರ್ಯಾಗಾರ ನಡೆಯಿತು



ಭಾಲ್ಕಿ: ತುರ್ತು ಪರಿಸ್ಥಿತಿಯಲ್ಲಿ ಮತ್ತು ವಿಪತ್ತು ಗಳಲ್ಲಿ ಮಾನಸಿಕ ಆರೋಗ್ಯ ಸೇವೆಗಳ ಲಭ್ಯತೆ ಎಂಬ ಧ್ಯೇಯ ವಾಕ್ಯ ದೊಂದಿಗೆ ವಿಶ್ವ ಮಾನಸಿಕ ದಿನಾಚರಣೆ ಯನ್ನು ORBIT ಸಂಸ್ಥೆ ವತಿಯಿಂದ ಭಾಲ್ಕಿ ಜಿಲ್ಲಾ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಯಿತು .ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯಕ್ರಮದ ವ್ಯವಸ್ಥಾಪಕರಾದ ಸಿಸ್ಟರ್ ಕ್ರಿಸ್ಟಿನ ರವರು, ಫಾ.ರೆನಾಲ್ಡ್,CMO ಆದ ಡಾಕ್ಟರ್ ಅಬ್ದುಲ್ ಖದೀರ್ ,ಮನೋ ವೈದ್ಯರಾದ ಡಾಕ್ಟರ್ ಅಮಲ್ ಶರೀಫ್ ,BHEO ಚಂದ್ರಶೇಖರ್ ,ರಫೀಕ್ ,ಬ್ರದರ್ ಅನ್ನಿ ರವರು ಹಾಜರಿದರು . ಸಿ ಸ್ಟರ್ ಕ್ರಿಸ್ಟಿನಾ ರವರು ಈ ವರ್ಷದ ಮಾನಸಿಕ ಆರೋಗ್ಯದ ದಿನಾಚರಣೆ ಕುರಿತು ಮಾತನಾಡಿದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

# TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
## ಗುಲ್ಬರ್ಗಾ ಧರ್ಮಕ್ಷೇತ್ರ

### Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in